ವಿಜಯಪುರ | ಸಂಪುಟ 02 | ಸಂಚಿಕೆ 85 | ಪುಟ 4 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಬುಧವಾರ, ಮೇ 22, 2024

“ಸಂಸದ ಪ್ರಜ್ವಲ್ ರೇವಣ್ಣ ಅವರದು ಎನ್ನಲಾದ ಸೆಕ್ಸ್ ವಿಡಿಯೋ ಲೀಕ್ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ನನ್ನ ಮತ್ತು ನನ್ನ ಕುಟುಂಬದ ಸದಸ್ಯರ ಮೊಬೈಲ್ ಫೋನ್ ಗಳನ್ನು ಕದ್ದಾಲಿಸಲಾಗುತ್ತಿದೆ. ಯಾರೋ ಮಾಡಿದ ತಪ್ಪಿಗೆ ಕುಟುಂಬ ಸರ್ವನಾಶ ಮಾಡುವುದು ಎಷ್ಟರ ಮಟ್ಟಿಗೆ ಸರಿ?”

ಉದಯರಶ್ಮಿ ದಿನಪತ್ರಿಕೆ ▶



– ಎಚ್. ಡಿ. ಕುಮಾರಸ್ವಾಮಿ
ಜೆಡಿಎಸ್ ರಾಜ್ಯಾಧ್ಯಕ್ಷರು

### ಶಿಕ್ಷಣ ಇಲಾಖೆ ಆದೇಶ । ಫಲಿತಾಂಶ ಪ್ರಕಟಿಸದಂತೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದ್ದರಿಂದ ಈ ನಿರ್ಣಯ

# ರಾಜ್ಯದ 5,8,9ನೇ ತರಗತಿಯ ಎಲ್ಲ ವಿದ್ಯಾರ್ಥಿಗಳೂ ಪಾಸ್!

**ಉದಯರಶ್ಮಿ ನ್ಯೂಸ್**

ಬೆಂಗಳೂರು: ರಾಜ್ಯದ ಎಲ್ಲಾ ಶಾಲೆಗಳ 5, 8 ಹಾಗೂ 9ನೇ ತರಗತಿಯ ವಿದ್ಯಾರ್ಥಿಗಳನ್ನು ಮುಂದಿನ ಶೈಕ್ಷಣಿಕ ತರಗತಿಯಲ್ಲಿ ಮುಂದುವರಿಸಲು ಅವಕಾಶ ಕಲ್ಪಿಸಲಾಗಿದೆ.

ಈ ಕುರಿತು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತೆ ಬಿ.ಬಿ ಕಾವೇರಿ ಆದೇಶ ಹೊರಡಿಸಿದ್ದು, “ಮಕ್ಕಳ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯಿಂದ ಶಾಲೆಗಳಲ್ಲಿ ನಡೆದಿರುವ ಪರೀಕ್ಷೆಗಳ ಮೌಲ್ಯಾಂಕನ ಆಧರಿಸಿ ಮುಂದಿನ ತರಗತಿಗೆ ದಾಖಲಾತಿ ಮಾಡಿಕೊಳ್ಳಲು ಅನುಕೂಲ ಮಾಡಿಕೊಡುವಂತೆ” ಸೂಚಿಸಿದ್ದಾರೆ.

2023-24ನೇ ಸಾಲಿನ ಫಲಿತಾಂಶವನ್ನು ರಾಜ್ಯದ ಎಲ್ಲಾ ಶಾಲೆಗಳಲ್ಲಿ ಏಪ್ರಿಲ್ 8ರಂದು ಪ್ರಕಟಿಸುವಂತೆ ಈ ಹಿಂದೆ ಆದೇಶಿಸಲಾಗಿತ್ತು. ಆದರೆ, ಫಲಿತಾಂಶ ಪ್ರಕಟಿಸದಂತೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದ್ದರಿಂದ ಇನ್ನೂ ಫಲಿತಾಂಶ ಪ್ರಕಟಗೊಂಡಿಲ್ಲ.



ಪ್ರಸ್ತುತ 2023-24ನೇ ಸಾಲಿನ ಶೈಕ್ಷಣಿಕ ವರ್ಷ ಅಂತ್ಯಗೊಳ್ಳುತ್ತಿದ್ದು, ಇದೇ ಮೇ 29 ರಿಂದ 2024- 25ನೇ ಸಾಲಿನ ಶೈಕ್ಷಣಿಕ ವರ್ಷ ಪ್ರಾರಂಭವಾಗಲಿದೆ. 2023-24ನೇ ಸಾಲಿನಲ್ಲಿ ವ್ಯಾಸಂಗ ಮಾಡಿದ 5, 8 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸದೇ ಇದ್ದಿದ್ದರಿಂದ ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ತರಗತಿಗೆ ಪ್ರವೇಶ, ದಾಖಲಾತಿ, ಪ್ರವೇಶ ಶುಲ್ಕ ಪಾವತಿ ಹಾಗೂ ಬೇರೆ ಸ್ಥಳಗಳಿಗೆ ವರ್ಗಾವಣೆಗೆ ಪ್ರಮಾಣ ಪತ್ರ, ಪ್ರಗತಿ ಪತ್ರ, ವ್ಯಾಸಂಗ ಪ್ರಮಾಣ ಪತ್ರ ವಿತರಿಸಲು ಶಾಲೆಗಳಿಗೆ ಸಾಧ್ಯವಾಗಿರಲಿಲ್ಲ.

ಹಾಗಾಗಿ, ಮಕ್ಕಳ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯಿಂದ ಶಾಲೆಗಳಲ್ಲಿ ನಡೆದಿರುವ ಪರೀಕ್ಷೆಗಳ ಮೌಲ್ಯಾಂಕನ ಆಧರಿಸಿ ಮುಂದಿನ ತರಗತಿಯಲ್ಲಿ ಮುಂದುವರಿಸಲು ಅವಕಾಶ ಕಲ್ಪಿಸುವಂತೆ ಆದೇಶಿಸಲಾಗಿದೆ.

ನ್ಯಾಯಾಲಯದ ಮಧ್ಯಂತರ ತೀರ್ಪಿನಂತೆ, 2023-24ನೇ ಸಾಲಿನ 5, 8 ಮತ್ತು 9ನೇ ತರಗತಿ ಖಂ-2 ಮೌಲ್ಯಾಂಕನವನ್ನು ತಡೆಹಿಡಿದಿರುವ ಹಿನ್ನೆಲೆ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಈಗಾಗಲೇ ಶಾಲೆಗಳಲ್ಲಿ ನಡೆದಿರುವ ಈಂ- 1, ಈಂ-2, ಈಂ-3, ಈಂ-4 2 ಖಂ-1 ಮೌಲ್ಯಾಂಕನ ಆಧಾರದ ಮೇಲೆ ತರಗತಿಗೆ ಮುಂದುವರೆಸಲು ಅವಕಾಶ ಕಲ್ಪಿಸುವಂತೆ ಸೂಚಿಸಲಾಗಿದೆ.

## ರಾಜ ನುಡಿ

ಮಳೆ ಬಂದು ರಸ್ತೆಯ ಪಕ್ಕ ನಿಂತ ಬೊಗಸೆಯಷ್ಟು ನೀರನ್ನು ಗಮನಿಸಿ. ಅಲ್ಲಿ ನೂರಾರು ಕ್ರಿಮಿಗಳ ಚಲನೆ ಕಾಣುತ್ತದೆ. ಬೊಗಸೆ ನೀರಿಗೂ ಜೀವವನ್ನು ಪೊರೆಯುವ ಶಕ್ತಿಯನ್ನು ಈ ನಿಸರ್ಗ ಮಾತೆ ಕೊಟ್ಟಿರುವಾಗ, ಇಡೀ ನದಿ, ಸಾಗರಗಳನ್ನು ಮನುಷ್ಯ ಮಾಲಿನ್ಯ ಮಾಡಿರುವುದು ಪರಿಸರದ ಮೇಲಿನ ಅತ್ಯಾಚಾರವೇ ಸರಿ..

-ಡಾ. ರಾಜಶೇಖರ ನಾಗೂರ

## ರಾಜಕಾಲುವೆಗಳ ಸ್ವಚ್ಛತೆಗೆ ಆದ್ಯತೆ ನೀಡಿ :ಡಿಸಿ ಟಿ.ಭೂಬಾಲನ್

**ಉದಯರಶ್ಮಿ ನ್ಯೂಸ್**

ವಿಜಯಪುರ: ಮುಂಬರುವ ದಿನಗಳಲ್ಲಿ ರಾಜ್ಯಾದ್ಯಂತ ಮುಂಗಾರು ಪೂರ್ವ ಹೆಚ್ಚಿನ ಮಳೆಯಾಗುವ ಮುನ್ಸೂಚನೆ ಇದ್ದು, ಜಿಲ್ಲೆಯಲ್ಲಿ ಮಳೆಯಿಂದಾಗುವ ಪ್ರವಾಹ ಪರಿಸ್ಥಿತಿಯನ್ನು ಎದುರಿಸಲು ಎಲ್ಲ ಇಲಾಖಾ ಅಧಿಕಾರಿಗಳು ಸನ್ನದರಾಗಬೇಕು. ನಗರ ಹಾಗೂ ಪಟ್ಟಣ, ಹಳ್ಳಿಗಳಲ್ಲಿರುವ ರಾಜಕಾಲುವೆಗಳ ಸ್ವಚ್ಚತೆಗೆ ಆದ್ಯತೆ ನೀಡಬೇಕು ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಸೂಚಿಸಿದರು.




ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಸಂಜೆ ಜರುಗಿದ ಬರಪರಿಸ್ಥಿತಿ ಹಾಗೂ ಮುಂಗಾರು ಪೂರ್ವ ಸಿದ್ಧತೆ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹವಮಾನ ಇಲಾಖೆ ಮುನ್ಸೂಚನೆ ಪ್ರಕಾರ ಜೂನ್, ಜುಲೈ ಹಾಗೂ ಅಗಸ್ಟ್ ತಿಂಗಳಲ್ಲಿ ಹೆಚ್ಚಿನ ಮಳೆ ಆಗುವ ಸಂಭವ ಇದೆ. ನಗರ ಪ್ರದೇಶಗಳಲ್ಲಿ ಮಳೆನೀರು ಸರಾಗವಾಗಿ ಹರಿಯುವಂತೆ ಚರಂಡಿ ಹಾಗೂ ರಾಜಕಾಲುವೆಗಳನ್ನು ಸ್ವಚ್ಚತೆ ಮಾಡಬೇಕು. ಯಾವುದೇ ಕಾರಣಕ್ಕು ರಸ್ತೆ ಹಾಗೂ ಮನೆಗಳ ಒಳಗೆ ಮಳೆನೀರು ನುಗ್ಗದಂತೆ ನೋಡಿಕೊಳ್ಳಬೇಕು ಎಂದರು.

ಪ್ರವಾಹ ಪರಿಸ್ಥಿತಿ ಉಂಟಾದರೆ ಯಾವುದೇ ರೀತಿಯ ಜೀವ ಹಾನಿಯಾಗದಂತೆ ತಡೆಯಲು ಹಾಗೂ ಪ್ರವಾಹ ಪರಿಸ್ಥಿತಿ ಉಂಟಾಗುವ ಸ್ಥಳಗಳ ಬಗ್ಗೆ ಮಾಹಿತಿ ಪಡೆದು ಮುನ್ನೆಚ್ಚರಿಕೆಯಾಗಿ ಅಲ್ಲಿ ಅಗತ್ಯ ಸಿದ್ಧತೆಗಳಾದ ದೋಣಿ, ಲೈಫ್ ಜಾಕೆಟ್, ಹಾಗೂ ನುರಿತ ಈಜುಗಾರರ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಬೇಕು ಎಂದು ಹೇಳಿದರು.

**ಸಿಡಿಲು ಆಘಾತ ತಡೆಗಟ್ಟಿ:**

ಮಳೆ, ಗುಡುಗು, ಮಿಂಚು ಪರಿಸ್ಥಿತಿಯಲ್ಲಿ ಯಾವುದೇ ರೀತಿಯ ಜೀವ ಹಾನಿಯಾಗದಂತೆ ತಡೆಯಲು ಮುಂಜಾಗೃತ ಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ಪ್ರಚಾರ ಕೈಗೊಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಿಡಿಲಿನ ಆಘಾತದ ಬಗ್ಗೆ ಜನ ಜಾನುವಾರು ಜೀವಹಾನಿ ತಪ್ಪಿಸಲು ಎಲ್ಲ ತಹಶೀಲ್ದಾರರು, ತಾ.ಪಂ. ಇಓಗಳು, ನಗರ ಸ್ಥಳೀಯ ಸಂಸ್ಥೆ ಅಧಿಕಾರಿಗಳು ರೈತರಲ್ಲಿ ಹಾಗೂ ಸಾರ್ವಜನಿಕರಲ್ಲಿ ಧ್ವನಿವರ್ಧಕ ಬಳಸಿ ಹಾಗೂ ರೈತ ಸಂಪರ್ಕ ಕೇಂದ್ರಗಳಲ್ಲಿ ರೈತ ಸಂಬಧಿತ ಎಲ್ಲ ಸಂಘ, ಸಂಸ್ಥೆಗಳಲ್ಲಿ ಮಳೆ, ಗುಡುಗು, ಮಿಂಚಿನಿಂದ ತಪ್ಪಿಸಿಕೊಳ್ಳುವ ಮುಂಜಾಗೃತ ಕ್ರಮಗಳ ಬಗ್ಗೆ ಪ್ರಚಾರ ಮಾಡಬೇಕು. ಮಳೆ ಬಂದಾಗ ರೈತರು ಹೊಲ, ಗದ್ದೆಗಳ ಬಯಲಲ್ಲಿ ಇರದೆ ಸುರಕ್ಷತಾ ಸ್ಥಳದಲ್ಲಿರಬೇಕು ಎಂದು ತಿಳಿಸಿದರು.

ಗ್ರಾಮಗಳಲ್ಲಿ ಕೆರೆಗಳು ಭರ್ತಿಯಾಗುವ ಹಾಗೂ ದುರ್ಬಲ ಬಂಡ/ಬದುಗಳನ್ನು ಮುಂಜಾಗೃತವಾಗಿ ಪರಿಶೀಲಿಸಬೇಕು. ಅಗತ್ಯವಿದ್ದಲ್ಲಿ ಈಗಲೇ ದುರಸ್ಥಿ ಕಾರ್ಯ ಕೈಗೊಳ್ಳಬೇಕೆಂದರು.

ಹೆಸ್ಕಾಂ ಅಧಿಕಾರಿಗಳು ಅಪಾಯಕಾರಿ ವಿದ್ಯುತ್ ಕಂಬಗಳ ಬಗ್ಗೆ ಈಗಲೇ ಗಮನ ವಹಿಸಿ, ಸ್ಥಳಾಂತರಗೊಳ್ಳಿಸಬೇಕು. ಹಳೆಯ ಮರಗಳ ಕೊಂಬೆಗಳು ಮುರಿದು ವಿದ್ಯುತ್ ತಂತಿಗಳ ಮೇಲೆ ಬೀಳುವುದನ್ನು ತಪ್ಪಿಸಬೇಕು. ಅಥವಾ ಅಂತಹ ರಂಬೆ ಕೊಂಬೆಗಳನ್ನು ಕತ್ತರಿಸಬೇಕು ಎಂದರು.

ವಿದ್ಯುತ್ ಸಂಪರ್ಕದಿಂದ ಯಾವುದೇ ಅನಾಹುತಗಳು ಆಗದಂತೆ ವಿವಿಧ ಸ್ಥಳಗಳನ್ನು ಗುರುತಿಸಿ, ಗಲೇ ಕ್ರಮಕೈಗೊಳ್ಳತಕ್ಕದ್ದು, ಎಲ್ಲ ತಾಲೂಕಾ ಟಾಸ್ಕ್ಫೋರ್ಸ್‌ಗಳು ಈಗಾಗಲೇ ಮುಂಜಾಗೃತೆಯಾಗಿ ಸಿದ್ಧಗೊಳ್ಳಬೇಕೆಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿ ಋಷಿ ಆನಂದ, ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಬಡವರಿಗೆ ಆರ್ಥಿಕ ಸಬಲತೆ ಕೊಡುವುದು ಅಭಿವೃದ್ಧಿಯಲ್ಲವೇ? :ಸಿಎಂ



ಮಂಗಳೂರು: ಬಡವರಿಗೆ ಆರ್ಥಿಕ ಸಬಲತೆ ಕೊಡುವುದು ಅಭಿವೃದ್ಧಿ ಅಲ್ಲವೇ? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಮಂಗಳೂರಿನಲ್ಲಿ ಮಾಧ್ಯಮದವ ರೊಂದಿಗೆ ಮಾತನಾಡಿದ ಅವರು, “ಗ್ಯಾರಂಟಿ ಯೋಜನೆಗಳನ್ನೇ ಸಾಧನೆ ಎಂದು ಬಿಂಬಿಸಲಾಗುತ್ತಿದೆ. ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ” ಎಂಬ ಬಿಜೆಪಿಗರ ಆರೋಪಕ್ಕೆ ಪ್ರತಿಕ್ರಿಯಿಸಿದರು.

“ಬಿಜೆಪಿ ಸುಳ್ಳು ಹೇಳುತ್ತಿದೆ. ನೀರಾವರಿಗೆ 18,000 ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ, ಅದು ಕಡಿಮೆಯೇ? ಏನೂ ಮಾಡಿಲ್ಲ ಎಂದರೆ ಏನು? ಗ್ಯಾರಂಟಿಗಳನ್ನು ಒಳಗೊಂಡಂತೆ 1,20,000 ಸಾವಿರ ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ಮೀಸಲಿರಿಸಲಾಗಿದೆ ಎಂದರು.

“ಬಿಜೆಪಿಯವರು ಬಜೆಟ್ ಓದುವುದಿಲ್ಲ, ಆರ್ಥಿಕತೆ ಬಗ್ಗೆ ಗೊತ್ತೂ ಇಲ್ಲ”

ಬಿಜೆಪಿಯವರು ಬಜೆಟ್ ಓದುವುದಿಲ್ಲ, ಆರ್ಥಿಕತೆ ಬಗ್ಗೆ ಅವರಿಗೆ ಗೊತ್ತೂ ಇಲ್ಲ ಎಂದು ಸಿಎಂ ಹೇಳಿದರು. ಅಭಿವೃದ್ಧಿ ಶೂನ್ಯ ಎನ್ನುತ್ತಾರೆ. ದೇಶಕ್ಕೆ ಕೇವಲ ರಾಜಕೀಯ ಸ್ವಾತಂತ್ರ್ಯ ಬಂದರೆ ಸಾಲದು. ಆರ್ಥಿಕ, ಸಾಮಾಜಿಕ ಶಕ್ತಿ ಬಂದಾಗ ಮಾತ್ರ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥ ಬರುತ್ತದೆ ಎಂದು ಅಂಬೇಡ್ಕರ್ ಹೇಳಿದ್ದರು. ಈ ಬಗ್ಗೆ ಬಿಜೆಪಿಗೆ ತಿಳಿದಿದೆಯೇ? ಎಂದು ಪ್ರಶ್ನಿಸಿದರು.

ನಿನ್ನೆ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ನಮ್ಮ ಸಾಧನೆಗಳನ್ನು ಜನರ ಮುಂದಿರಿಸಿದ್ದೇವೆ ಎಂದು ತಿಳಿಸಿದರು.

### ಆಸ್ಕಿ, ಬೆಕಿನಾಳ, ಬೂದಿಹಾಳ(ಪಿ.ಟಿ) ಕೆರೆಗಳಿಗೆ ನೀರು ತುಂಬಿಸುವಂತೆ ಆಗ್ರಹ

## ಅಸ್ಕಿ ಕೆರೆಯಲ್ಲಿಯೇ ಧರಣಿ ಕುಳಿತ ರೈತರು




**ಉದಯರಶ್ಮಿ ನ್ಯೂಸ್**

ಕಲಕೇರಿ: ಸಮೀಪದ ಆಸ್ಕಿ ಕೆರೆಯಲ್ಲಿ ನೂರಾರು ರೈತರು ಆಸ್ಕಿ, ಬೆಕಿನಾಳ, ಹಾಗೂ ಬೂದಿಹಾಳ ಪಿ.ಟಿ ಕೆರೆ ನೀರು ತುಂಬಿಸುವಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಮಂಗಳವಾರ ಬೆಳಗಿನಿಂದ ಅನಿರ್ದಿಷ್ಠ ಸತ್ಯಾಗ್ರಹವನ್ನು ಹಮ್ಮಿಕೊಂಡಿದ್ದಾರೆ.

ಗ್ರಾಮದ ಮುಖ್ಯ ಬಜಾರದಿಂದ ಹಲಗಿ ಸದ್ದಿನೊಂದಿಗೆ ರೈತರು ವಿವಿಧ ಘೋಷಣೆಗಳನ್ನು ಕೂಗುತ್ತಾ ಕೆರೆಯಡೆಗೆ ಹೆಜ್ಜೆ ಹಾಕುತ್ತಾ ಕೆರೆಗೆ ನೀರು ಹರೆಸುವವರೆಗೆ ಧರಣಿ ಮುಂದುವರೆಯುವುದು ಎಂಬುದು ಧರಣಿ ನಿರತರ ಬೇಡಿಕೆಯಾಗಿತ್ತು,

ಆಸ್ಕಿ ಗ್ರಾಮದ ರೈತ ಸಂಘದ ಅಧ್ಯಕ್ಷ ಸಂಗನಗೌಡ ಬಿರಾದಾರ ಅವರು ಮಾತನಾಡುತ್ತಾ, ಈ ವರ್ಷದ ಭೀಕರ ಬರಗಾಲದ ನಿಮಿತ್ಯವಾಗಿ ಭಾಗದಲ್ಲಿ ಎಲ್ಲ ಹಳ್ಳ, ಕೆರೆಗಳು ಬತ್ತಿಹೋಗಿ ಬಾವಿ ಹಾಗೂ ಕೊಳವೆ ಬಾವಿಯಲ್ಲಿನ ನೀರು ಕಡಿಮೆಯಾಗಿ ಕೃಷಿಗೆ ನೀರಿಲ್ಲದೇ, ಜನ ಜಾನುವಾರುಗಳಿಗೆ ಕುಡಿಯಲು ಹನಿ ನೀರು ಇಲ್ಲದೇ ಹರಸಾಹಸ ಪಡುವಂತಾಗಿದೆ ಎಂದರು

ರೈತ ಸಂಘದ ತಾ. ಉಪಾಧ್ಯಕ್ಷ ಗೌಡಪ್ಪಗೌಡ ಹಳಿಮನಿ ಮಾತನಾಡುತ್ತಾ ಈ ವರ್ಷದಲ್ಲಿ ಅಡವಿಯಲ್ಲಿ ಮಾನವರಿಗೆ ಮತ್ತು ನಮ್ಮ ಧನಕರುಗಳಿಗೆ ಕುಡಿಯಲು ನೀರು ಸಿಗುತ್ತಿಲ್ಲ, ಆದ್ದರಿಂದ ಯಾರಿಗೆ ನೀರು ಕೇಳಬೇಕು ತಿಳಿಯುತ್ತಿಲ್ಲ, ಸಂಬಂದಿಸಿದ ತಾಲೂಕಾ ದಂಡಾಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳಿಗೆ, ಸಾಕಷ್ಟು ಬಾರಿ ಮನವಿ ಸಲ್ಲಿಸಿದರು ಪ್ರಯೋಜನವಾಗಿಲ್ಲ, ಕೂಡಲೇ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿ ನೀರು ಹರಿಸಬೇಕು ಎಂದರು,


ಈ ವೇಳೆ ತಾಳಿಕೋಟಿ ತಾ ಅಧ್ಯಕ್ಷರಾದ ಶ್ರೀಶೈಲ ವಾಲಿಕಾರ ಅವರು ಮಾತನಾಡುತ್ತಾ ಈ ಕೆರೆಗಳಿಗೆ ನೀರು ಹರಿಸದಿದ್ದರೆ ಈ ಬಾಗದ ಆಸ್ಕಿ, ಬೆಕಿನಾಳ, ಬೂದಿಹಾಳ, ಜಲಪೂರ, ಬನ್ನೆಟ್ಟಿ, ನೀರಲಗಿ, ವಣಕ್ಯಾಳ ಗ್ರಾಮ ರೈತರು ಸೇರಿಕೊಂಡು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಹೋರಾಟ ಮಾಡುವುದು ಅನಿವಾರ್ಯವಾಗಲಿದೆ ಎಂದರು.

ಜಿಲ್ಲಾಧ್ಯಕ್ಷ ಸಂಗಮೇಶ ಸಗರ, ಡಾ॥ ಪ್ರಭುಗೌಡ ಬಿರಾದಾರ, ಅಖಿಲ ಕರ್ನಾಟಕ ರಾಜ್ಯ ಅನ್ನದಾತ ರೈತ ಸಂಘದ ಜಿಲ್ಲಾ ಯುವ ಘಟಕದ ಅಧ್ಯಕ್ಷ ಅನ್ವರ ಅವಟಿ ಬೆಂಬಲಿಸಿ ಮಾತನಾಡಿದರು, ಶಿವಶಂಕರ ಸಜ್ಜನ, ಲಿಂಗಣ್ಣ ನಾಯಕಲ್ ಮಾತನಾಡಿದರು.

ಅಧಿಕಾರಿಗಳ ಭೇಟಿ : ಧರಣಿ ಸ್ಥಳಕ್ಕೆ ಗ್ರಾಮ ಲೆಕ್ಕಾಧಿಕಾರಿಗಳಾದ ಪವನ ಬೆಂಕಿ, ಮತ್ತು ಸರ್ಕಲ್ ವಿನೋದ ಸಿಂದಗಿರಿ ಅವರು ಮನವಿ ಕೊಡಿ ಮೇಲಾಧಿಕಾರಿಗಳಿಗೆ ತಿಳಿಸುತ್ತೆವೆ ಎಂದರು, ಆಗ ರೈತರು ಅದಕ್ಕೆ ಜಗದೇ ಸ್ಥಳಕ್ಕೆ ತಹಶಿಲ್ದಾರರು, ಹಾಗೂ ಸಂಬಂಧಿಸಿದ ಕೆ.ಬಿ.ಜೆ.ಎನ್.ಎಲ್ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಆಗಮಿಸಿ ಕೆರೆಗೆ ನೀರು ಹರೆಸುವವರೆಗೂ ನಾವೂ ಹೋರಾಟದಿಂದ ಎಳುವುದಿಲ್ಲ ಎಂದು ಪಟ್ಟು ಹಿಡಿದರು.

ಈ ವೇಳೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಉಪಾಧ್ಯಕ್ಷ ಶರಣಗೌಡ ಬಿರಾದಾರ, ತಾ. ಸಂಚಾಲಕ ಮಹಿಬೂಬ ಗೊಬ್ಬರಡಗಿ, ಗ್ರಾ.ಪಂ ಉಪಾಧ್ಯಕ್ಷರಾದ ಅಯ್ಯಪ್ಪ ಮುಗಳಿ, ರಾಮನಗೌಡ ಚೌದ್ರಿ, ಮಲ್ಲಪ್ಪ ಅಂಗಡಿ, ಮುತ್ತು ಹೂಗಾರ, ಗುರನಗೌಡ ಬಿರಾದಾರ, ಮಂಜು ಪಡಶೆಟ್ಟಿ, ಮಹದೇವಪ್ಪ ಮಾದರ, ವೆಂಕಣ್ಣ ಗುತ್ತ್ಯಾಳ, ಬಸವರಾಜ ಹಡಪದ, ಶಾಂತಗೌಡ ಬಿರಾದಾರ, ಪ್ರಭುಗೌಡ ಬಿರಾದಾರ, ಪ್ರಭುಗೌಡ ಹಳಿಮನಿ, ಶಂಕರ ಮಗದಾಳ, ದೇವಿಂದ್ರ ತುರಕನಗೇರಿ, ಬೆಕಿನಾಳ ಗ್ರಾಮದ ದೇವಿಂದ್ರಪ್ಪಗೌಡ ಪಾಟೀಲ, ಶ್ರೀಶೈಲ ಸಜ್ಜನ, ಮಲ್ಲಪ್ಪ ಮುದನೂರ, ಶ್ರೀಶೈಲ ಹಿರೇಮಠ, ರಾಮನಗೌಡ ಕರಕಳ್ಳಿ, ಲಕ್ಷ [illegible]ಣ ಚಲವಾದಿ, ಮರಲಿಂಗಪ್ಪ ನಾಟಿಕಾರ, ಮಡಿವಾಳಪ್ಪ ಸಜ್ಜನ, ಬೂದಿಹಾಳ ಗ್ರಾಮದ ಬಸನಗೌಡ ಪಾಟೀಲ, ಸಂತೋಷ ಕುಳಗೇರಿ, ಭೀಮನಗೌಡ ಬಿರಾದಾರ, ಶರಣಪ್ಪ ಹಯ್ಯಾಳ, ಜಟ್ಟೆಪ್ಪ ಮಾದರ ಸೇರಿದಂತೆ ಅನೇಕರು ಇದ್ದರು

## ವಚನ ಚಿಂತನ 384



*ಎಲ್ಲರ ಗಂಡರು ಬೇಂಟೆಯ ಹೋದರು,*
*ನೀನೇಕೆ ಹೋಗೆ, ಎಲೆ ಗಂಡನೆ*
*ಸತ್ತುದ ತಾರದಿರು, ಕೈ ಮುಟ್ಟಿ ಕೊಲ್ಲದಿರು.*
*ಅಡಗಿಲ್ಲದ ಮನೆಗೆ ಬಾರದಿರು.*
*ದೇವರ ಧರ್ಮದಲೊಂದು ಬೇಂಟೆ ದೊರೆಕೊಂಡಡೆ*
*ಕೂಡಲಸಂಗಮದೇವಂಗರ್ಪಿತ ಮಾಡುವೆ, ಎಲೆ ಗಂಡನೆ.*

ಈ ವಚನದಲ್ಲಿ ಬಸವಣ್ಣನವರು (ಶರಣ) ತಮ್ಮ ಪತಿ(ಆತ್ಮ=ಪ್ರಾಣಲಿಂಗ)ಯೊಂದಿಗೆ ಅನುಸಂಧಾನ ಸಂಭಾಷಣೆಯಲ್ಲಿ ತೊಡಗಿರುವುದನ್ನು ಕಾಣುತ್ತೇವೆ, ಇಲ್ಲಿ ಶರಣಸತಿ ಲಿಂಗಪತಿ ಭಾವದಲ್ಲಿ ಬಸವಣ್ಣನವರು ತಮ್ಮ ಪತಿ ಲಿಂಗಕ್ಕೆ ಬೇಟೆಯಾಡಿ ಆಹಾರವನ್ನು ತರುವಂತೆ ಬಿನ್ನಯಿಸಿಕೊಳ್ಳುತ್ತಾರೆ “ಎಲ್ಲರ ಗಂಡರು ಬೇಂಟೆಯ ಹೋದರು, ನೀನೇಕೆ ಹೋಗೆ, ಎಲೆ ಗಂಡನೆ” ಎನ್ನುವಲ್ಲಿ ನಾವು ಅವರಲ್ಲಿ ಉಂಟಾದ ಹಸಿವಿನ ತುಡಿತವನ್ನು ಕಾಣುತ್ತೇವೆ. ತಾವು ಬಯಸಿದ ಬೇಟೆ ಹೇಗಿರಬೇಕು,ಅದನ್ನು ಹೇಗೆ ದಕ್ಕಿಸಿಕೊಳ್ಳಬೇಕು ಎನ್ನುವುದಕ್ಕೆ ಮೂರು ಕರಾರುಗಳನ್ನು ಮುಂದಿಡುತ್ತಾರೆ.”ಸತ್ತುದ ತಾರದಿರು, ಕೈ ಮುಟ್ಟಿ ಕೊಲ್ಲದಿರು. ಅಡಗಿಲ್ಲದ ಮನೆಗೆ ಬಾರದಿರು.” ಈ ಮೊದಲನೇ ಕರಾರಿನಲ್ಲಿ ಬೇಟೆಯಾಡಬೇಕು ಆದರೆ ಆ ಬೇಟೆ ಸಾಯಬಾರದು. ಮುಂದುವರೆದು ಆ ಬೇಟೆಯನ್ನು ಕೈಯಾರೆ ಕೊಲ್ಲದೆ ಬೇಟೆಯನ್ನು ವಶಪಡಿಸಿಕೊಂಡು ತರುವುದು. ಆಹಾರ ರೂಪದ ಬೇಟೆಯನ್ನು ತರದೆ ಮನೆಗೆ ಬರುವಂತಿಲ್ಲ. ಬಸವಣ್ಣನವರು ಬಯಸಿದ ಬೇಟೆ ಯಾವುದು ಎಂದು ಚಿಂತನಗೈದಾಗ ಅದು “ ಅರಿವು/ಜ್ಞಾನ “ ಎಂಬುದಾಗಿದೆ.ಇಲ್ಲಿ ಬೇಟೆಗೆ ಹೋಗುವುದು ಎಂದರೆ ಮಹಾಲಿಂಗದ ಅರಿವು ಜಾಗೃತಗೊಳಿಸಿ ಕೊಳ್ಳಲು ಸಾಧನೆಗೆ ತೊಡಗಿಕೊಳ್ಳುವುದು. ಶರಣಸತಿ ಭಾವದ ಅಂಗಕ್ಕೆ ಉಂಟಾದ ಹಸಿವುಯಾವುದೆಂದರೆ ಅದು ಜ್ಞಾನದ ಹಸಿವು, ಅರಿವಿನ ಹಸಿವು. ಬಸವಣ್ಣನವರು ಪತಿ ಸ್ವರೂಪದ ಲಿಂಗದಲ್ಲಿ ಬೇಡಿದ ಬೇಟೆಯೇ ಅರಿವು/ಜ್ಞಾನ ಇದನ್ನು ಸಾಧಕನು ಕೈಯ್ಯಾರೆ ಕೊಲ್ಲಲು ಸಾಧ್ಯವಿಲ್ಲ. ಇದಕ್ಕೆ ಸಾವಿಲ್ಲ . ಇಂತಹ ಬೇಟೆಯನ್ನು ತರದೆ ಮನೆಗೆ ಬಾರದಿರು ಎನ್ನುವುದು ಸಾಧನೆಯಿಂದ ಹಿಂದೆಸರಿಯದೆ -ಮುನ್ನುಗ್ಗಲು ಪ್ರೋತ್ಸಾಹಿಸುವುದಾಗಿದೆ. ಈ ಬೇಟೆಯನ್ನು ದೇವರ ಧರ್ಮದ ಬೇಟೆಯ ಎಂದು ಬಣ್ಣಿಸಿದ್ದಾರೆ. ಅದನ್ನು ಕೂಡಲಸಂಗಮದೇವ ನಿನಗೆ ಅರ್ಪಿಸುವೆ ಎಂದು ಹೇಳುವಲ್ಲಿ ಕೂಡಲಸಂಗಮದೇವರ (ಮಹಾಲಿಂಗ) ಅರಿವನ್ನು ಹೊಂದುವುದು ಆಗಿದೆ. ಇಷ್ಟಲಿಂಗ ಪೂಜೆಯ ಪರಿಣಾಮವೆಂದರೆ ಇಂತಹ ಬೇಟೆಯುನ್ನುಹೊಂದುವುದಾಗಿದೆ.ಬಸವಣ್ಣನವರು ಬಯಸಿದ ಈ ಬೇಟೆ ನಮ್ಮೆಲ್ಲರದಾಗಲಿ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

### ಬಿಜೆಪಿ ನಗರ ಮಂಡಲ ರೈತ ಮೋರ್ಚಾ ವತಿಯಿಂದ ಬ್ರಹತ್ ಪ್ರತಿಭಟನೆ

## ರೈತ ಉತ್ಪಾದಕರ ಸಂಸ್ಥೆಗಳ ಬಾಕಿ ಹಣ ಬಿಡುಗಡೆಗೆ ಆಗ್ರಹ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕರ್ನಾಟಕ ರಾಜ್ಯ ಸರ್ಕಾರದಿಂದ ರಚನೆ ಆಗಿರುವ ರೈತ ಉತ್ಪಾದಕರ ಸಂಸ್ಥೆಗಳ ಬಾಕಿ ಹಣ ಬಿಡುಗಡೆಗೊಳಿಸಲು ಆಗ್ರಹಿಸಿ ಭಾರತೀಯ ಜನತಾ ಪಾರ್ಟಿ, ನಗರ ಮಂಡಲ ರೈತ ಮೋರ್ಚಾ ವತಿಯಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿ, ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು.



ಅಧಿಕಾರಕ್ಕೆ ಬಂದು ಒಂದು ವರ್ಷ ಕಳೆದಿರುವ ಕಾಂಗ್ರೆಸ್ ಸರ್ಕಾರದ ಸಾಧನೆ ಮಾತ್ರ ಶೂನ್ಯ. ಗ್ಯಾರಂಟಿ ಗುಂಗಿನಲ್ಲಿರುವ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಸಚಿವರು ಅಭಿವೃದ್ಧಿ ಸಂಪೂರ್ಣ ಮರೆತಿದ್ದಾರೆ. ತಮ್ಮದೆ ಪಕ್ಷದ ಶಾಸಕರು ಕೂಡ ಅಸಮಧಾನ ವ್ಯಕ್ತಪಡಿಸುತ್ತಿದ್ದಾರೆ. ಅದೇ ಅವರ ಕಳಪೆ ಆಡಳಿತ ತೋರಿಸುತ್ತದೆ.

ಅಭಿವೃದ್ಧಿ ಕಾಮಗಾರಿಗೆ ಹಣ ನೀಡದ ಸರ್ಕಾರ, ರೈತರ ಏಳಿಗಾಗಿ ರಚನೆಗೊಂಡಿರುವ ರೈತ ಉತ್ಪಾದಕರ ಸಂಸ್ಥೆಗಳಿಗೆ ನೀಡಬೇಕಾದ ಹಣ ಬಾಕಿ ಉಳಿಸಿಕೊಳ್ಳುವ ಮೂಲಕ ಅನ್ನದಾತರಿಗೂ ಅನ್ಯಾಯ ಮಾಡಿದೆ. ಹಣ ನೀಡದೆ ಇರುವುದರಿಂದ 10 ಲಕ್ಷ ರೈತರಿಗೆ ಹಾಗೂ 12 ಸಾವಿರ ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕರಿಗೆ ತೊಂದರೆ ಆಗುತ್ತಿದೆ. ಕೂಡಲೇ ಸರ್ಕಾರ ಎಚ್ಚೆತ್ತುಕೊಂಡು ಬಾಕಿ ಹಣ ಬಿಡುಗಡೆಗೊಳಿಸದಿದ್ದರೆ, ರಾಜ್ಯದಾದ್ಯಂತ ಉಗ್ರವಾದ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ನಗರ ಮಂಡಲ ಅಧ್ಯಕ್ಷ ಶಂಕರ ಹೂಗಾರ, ರೈತ ಮೋರ್ಚಾ ಅಧ್ಯಕ್ಷ ರಾಚು ಬಿರಾದಾರ, ಪ್ರಧಾನ ಕಾರ್ಯದರ್ಶಿ ಆನಂದ ಪಡಗಾನೂರ, ಕಾರ್ಯದರ್ಶಿ ಬಸನಗೌಡ ಬಿರಾದಾರ, ಸದಸ್ಯರಾದ ಕುಮಾರ ನಿಡೋಣಿ, ಜಗದೀಶ ಪಚ್ಯಾಪುರ, ರಮೇಶ ಚಿಕ್ಕಲಕಿ, ಸಿದ್ದು ಬಿರಾದಾರ, ಹಣಮಂತ ಹಡಪದ, ರೋಹಿಣಿ ಚಾಮೇಕರ, ರೇಣುಕಾ ಪರಸಪ್ಪಗೋಳ ಮತ್ತಿತರರು ಇದ್ದರು.

# ಸತತ ಅಧ್ಯಯನದಿಂದ ಸಾಧನೆ ಸಾಧ್ಯ :ಪ್ರಭು ಶ್ರೀ



**ಉದಯರಶ್ಮಿ ನ್ಯೂಸ್**

ಚಿಮ್ಮಡ: ಪರೀಕ್ಷಾ ಸಮಯದಲ್ಲಿ ಪುಸ್ತಕ ಹಿಡಿಯುವುದಕ್ಕಿಂತ ಸತತ ಅಧ್ಯಯಣದಿಂದಲೇ ಸಾಧನೆ ಮಾಡಲು ಸಾಧ್ಯವೆಂದು ಸ್ಥಳಿಯ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಹೇಳಿದರು.

ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಶಾಲಾ ಅಭೀವೃದ್ಧಿ ಸಮೀತಿ ಹಾಗೂ ಸರಕಾರಿ ಪ್ರೌಢಶಾಲೆಯ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ "ಸಾಧಕರ ಸತ್ಕಾರ" ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದ ಅವರು ಈ ಬಾರಿ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಕಡು ಬಡವರ ಮಕ್ಕಳೇ ರಾಜ್ಯದಾದ್ಯಂತ ಸಾಧನೆ ಮಾಡಿದ್ದು ಅದರಲ್ಲು ವಿದ್ಯಾರ್ಥಿನಿಯರೇ ಹೆಚ್ಚಿನ ಪ್ರಮಾಣದಲ್ಲಿ ರ‍್ಯಾಂಕ ಪಡೆದದ್ದು ಸೋಜಿಗದ ಸಂಗತಿ ಏಕೆಂದರೆ ವಿದ್ಯಾರ್ಥಿಗಳೂ ಸಮ ಪ್ರಮಾಣದಲ್ಲಿ ವಿದ್ಯಾರ್ಜನೆ ಮಾಡಿದರೂ ರ‍್ಯಾಂಕ್ ಪಟ್ಟಿಯಲ್ಲಿ ಬರುತ್ತಿಲ್ಲ ಇದು ಪಾಲಕರು ಎಚ್ಚೆತ್ತುಕೊಳ್ಳಬೇಕಾದ ಸಂಗತಿ. ತಮ್ಮ ಮಕ್ಕಳು ಅಭ್ಯಾಸದ ಸಮಯವನ್ನು ಮೊಬೈಲ್, ದುಶ್ಚಟಗಳತ್ತ ಬಳಸುತಿದ್ದರೆ ಮುಂದೆ ತೊಂದರೆ ಅನುಭವಿಸಬೇಕಾಗುತ್ತದೆ ಎಂದರು.

ಪ್ರೌಢಶಾಲೆಯ ಮುಖ್ಯೋಪಾದ್ಯಾಯೆ ಶ್ರೀಮತಿ ಎಂ. ಎಸ್. ಜಿಟ್ಟಿ ಮಾತನಾಡಿ ಹಲವಾರು ಕೊರತೆಗಳ ನಡುವೇಯೂ ನಮ್ಮ ಶಾಲೆ ಖಾಸಗೀ ಶಾಲೆಗಳಿಗೆ ಪೈಪೋಟಿ ನೀಡುತ್ತಿರುವುದು ಸಂತೋಷದ ಸಂಗತಿ ಎಂದರು

ರಘುನಾಥ ಪ್ರೀಯ ಸಾಧು ಮಹಾರಾಜರ ಮಠದ ಶ್ರೀ ಜನಾರ್ಧನ ಮಹಾರಾಜರು ಮಾತನಾಡಿದರು.

ಎಸ್ಡಿಎಂಸಿ ಅಧ್ಯಕ್ಷ ಮಾರುತಿ ಮಮದಾಪೂರ, ಗ್ರಾ.ಪಂ. ಮಾಜಿ ಅಧ್ಯಕ್ಷ ಗುರಲಿಂಗಪ್ಪಾ ಪೂಜಾರಿ, ಪ್ರಕಾಶ ಪಾಟೀಲ, ಆನಂದ ಕವಟಿ, ಅಶೋಕ ಮೋಟಗಿ, ಬಸವರಾಜ ಕುಂಚನೂರ, ತಾ.ಪಂ. ಮಾಜಿ ಉಪಾಧ್ಯಕ್ಷ ಪ್ರಭು ಮುಧೋಳ, ಗುರುಪಾದ ಉರಭಿನವರ, ಮನೋಜ ಹಟ್ಟಿ, ಚನ್ನಪ್ಪ ತೇಲಿ ಸೇರಿದಂತೆ ಶಿಕ್ಷಕರು ಪಾಲಕರು ಉಪಸ್ಥಿತರಿದ್ದರು.

# ಅಕ್ರಮ ಮದ್ಯ ಮಾರಾಟ ತಡೆಗೆ ಆಗ್ರಹಿಸಿ ಮಹಿಳೆಯರಿಂದ ಮನವಿ



**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ಗ್ರಾಮೀಣ ಪ್ರದೇಶದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟ ತಡೆದು ಬಡ ಕುಟುಂಬಗಳ ಸುಗಮ ಸಂಸಾರ ನಿರ್ವಹಣೆಗೆ ಅವಕಾಶ ಕಲ್ಪಿಸುವಂತೆ ಆಗ್ರಹಿಸಿ ಮಹಿಳೆಯರು ಹಾಗೂ ಗ್ರಾಮಸ್ಥರು ತಹಶೀಲ್ದಾರ ಪ್ರಕಾಶ ಸಿಂದಗಿ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ತಹಶೀಲ್ದಾರ ಕಚೇರಿಗೆ ಮಂಗಳವಾರ ಆಗಮಿಸಿದ ದೇವೂರ, ದೇವೂರ ಎಲ್.ಟಿ 1 ಮತ್ತು 2 ರ ಮಹಿಳೆಯರು ಗ್ರಾಮ ಹಾಗೂ ತಾಂಡಾಗಳಲ್ಲಿ ಮಾಡಲಾಗುತ್ತಿರುವ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕುವಂತೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆಯ ಜಿಲ್ಲಾ ಘಟಕದ ಮಹಿಳಾ ಅಧ್ಯಕ್ಷೆ ರೇಣುಕಾ ಪಾಟೀಲ ಮಾತನಾಡಿ, ದೇವೂರ ಗ್ರಾಮ ಮತ್ತು ತಾಂಡಾಗಳಲ್ಲಿ ಅಕ್ರಮವಾಗಿ ಸಾರಾಯಿ ತಯಾರಿಸಿ ಸಿದ್ಧಾರೂಢ ಬೋರಗಿ, ಅನಸೂಬಾಯಿ ಮಾದೇವಪ್ಪ ಸುಂಬಡ ಮಾಲೀಕತ್ವದ ಕಿರಾಣಿ ಅಂಗಡಿ, ಅಪ್ಪಾಸಾಹೇಬಗೌಡ ಪಾನ್ ಶಾಪ್, ಬಾಸು ರಾಠೋಡ, ಶಂಕರ ರಾಠೋಡ ಸಂತೋಷ ರಾಠೋಡರ ದಾಬಾಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಈ ಬಗ್ಗೆ ಪ್ರಶ್ನೀಸಿದರೆ ನೀವಾರು ಕೇಳುವವರು ಎಂದು ನಮಗೆ ದಬಾಯಿಸುತ್ತಾರೆ. ಅಕ್ರಮ ಮದ್ಯ ಮರಾಟದ ಫಲವಾಗಿ ಸ್ಥಳೀಯ 8 ರಿಂದ 10 ವರ್ಷದ ಮಕ್ಕಳು ಕುಡಿಯುವ ಚಟಕ್ಕೆ ಅಂಟಿಕೊಂಡಿದ್ದಾರೆ ಇದರಿಂದ ಮನೆ ನಿರ್ವಹಣೆ ಮಾಡುವ ಮಹಿಳೆಯರು ಭಯಭೀತರಾಗಿದ್ದಾರೆ. ಮನೆಯಲ್ಲಿ ಗಂಡ ಮತ್ತು ಮಕ್ಕಳ ಕುಡಿಯುವ ಚಟಕ್ಕೆ ಮಹಿಳೆಯರು ಮಂಗಳಸೂತ್ರ, ಕಾಲುಂಗರ ಸೇರಿದಂತೆ ಆಭರಣಗಳನ್ನು ಕಳೆದುಕೊಳ್ಳುವಂತಾಗಿದೆ. ಕೂಡಲೇ ತಾಲ್ಲೂಕಾಡಳಿತ ಈ ಕುರಿತು ಕ್ರಮ ವಹಿಸುವಂತೆ ಆಗ್ರಹಿಸಿದರು.

ದಲಿತ ಸಂಘರ್ಷ ಸಮಿತಿ ಬೆಳಗಾವಿ ವಿಭಾಗೀಯ ಸಂಚಾಲಕ ರಾವುತ ತಳಕೇರಿ ಮಾತನಾಡಿ, ಅಕ್ರಮ ಮದ್ಯ ಮಾರಾಟ ಕೇವಲ ಈ ಗ್ರಾಮಗಳಲ್ಲಿ ಮಾತ್ರ ನಡೆಯುತ್ತಿಲ್ಲ. ಪಟ್ಟಣ, ಪಡಗಾನೂರ ಸೇರಿದಂತೆ ಹಲವು ಗ್ರಾಮಗಳಲ್ಲಿ ನಿರ್ಭಯವಾಗಿ ಜರುಗುತ್ತಿದೆ. ಇದಕ್ಕೆ ಕಡಿವಾಣ ಹಾಕದಿದ್ದರೇ ಗ್ರಾಮೀಣ ಬಡಕುಟುಂಬಗಳು ಹಾಳಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಅಬಕಾರಿ ಇಲಾಖೆ ಈ ಕುರಿತು ತುರ್ತು ಕ್ರಮವಹಿಸಬೇಕು ಎಂದರು. ನಂತರ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ತಹಶೀಲ್ದಾರ ಅಬಕಾರಿ ಇಲಾಖೆಯೊಂದಿಗೆ ಸೇರಿ ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಮಾದೇವಿ ಬಿರಾದಾರ, ಮಲಕಮ್ಮ ಪಾಟೀಲ, ಚಂದವ್ವಾ ಬಿರಾದಾರ, ಸುಂದ್ರಾಬಾಯಿ ಪಾಟೀಲ, ಶೋಭಾ ಬಿರಾದಾರ, ಅವ್ವಮ್ಮ ಪಾಟೀಲ, ಮಂಜುಳಾ ಬಿರಾದಾರ, ಗೌರಾಬಾಯಿ ಗೊಡ್ಯಾಳ, ಪಾರ್ವತಿ ಪಾಟೀಲ, ಬಿಸ್ಮಿಲ್ಲಾ ನದಾಫ್, ಮಹಾದೇವಿ ಪಾಟೀಲ, ಹಣಮಂತ್ರಾಯಗೌಡ ಪಾಟೀಲ, ಶಿವಪುತ್ರಗೌಡ ಪಾಟೀಲ, ಎಸ್. ಎಸ್.ಸಜ್ಜನ, ಎಸ್.ಕೆ.ಉಪ್ಪಾರ, ಸಿದ್ಧನಗೌಡ ಬಿರಾದಾರ ಇದ್ದರು.

# ಮೂರ್ಖನ ಸಹವಾಸ



**ಉದಯರಶ್ಮಿ ದಿನಪತ್ರಿಕೆ**

ಅಕ್ಬರ್ ಬಾದಶಹನ ಮನಸ್ಸಿನಲ್ಲಿ 'ಮೂರ್ಖರ ಜೊತೆಗೆ ಕೆಲಸ ಮಾಡುವ ಸಂದರ್ಭ ಬಂದರೆ ಏನು ಮಾಡಬಹುದು?' ಎಂಬ ಚಿಂತೆಯು ಸದಾ ಕೊರೆಯುತ್ತಿತ್ತು. ಈ ವಿಚಾರವನ್ನು ಅಕ್ಬರನು ಮರೆಯಲು ಸತತವಾಗಿ ಪ್ರಯತ್ನಿಸುತ್ತಿದ್ದರೂ ಬಿಡದೇ ಪ್ರಶ್ನೆಯು ಈತನನ್ನು ಕಾಡುತ್ತಿತ್ತು. ಒಂದು ದಿನ ಅಕ್ಬರ್ ದರ್ಬಾರನ್ನು ಕರೆದಿದ್ದ, ಆಗ ಅಕ್ಬರನಿಗೆ ಆತನ ಚಿಂತೆಯೂ ನೆನಪಾಯಿತು. ಆಗ ತನ್ನ ಸಭೆಯಲ್ಲಿ 'ಮೂರ್ಖರ ಜೊತೆಯಲ್ಲಿ ಕೆಲಸ ಮಾಡುವ ಸಂದರ್ಭ ಬಂದರೆ ಏನು ಮಾಡಬೇಕು' ಎಂದು ಎಲ್ಲರನ್ನು ಕೇಳಿದ. ಅಕ್ಬರನ ಪ್ರಶ್ನೆಗೆ ಬೀರಬಲ್ಲನು ಮುಗುಳ್ನಕ್ಕು ಮೌನವಾಗಿ ಕುಳಿತುಕೊಂಡು ಬಿಟ್ಟ.

ಈ ಪ್ರಶ್ನೆಯನ್ನು ಅಕ್ಬರ್ ಒಬ್ಬ ಪಂಡಿತನ ಬಳಿ ಕೇಳುತ್ತಾನೆ, ಆಗ ಆ ಪಂಡಿತನು ಅಂತಹ ಮೂರ್ಖರಿದ್ದರೆ ಅವರ ತಲೆ ಬೋಳಿಸಿ ಕತ್ತೆಯ ಮೇಲೆ ಮೆರವಣಿಗೆ ಮಾಡಬೇಕು ಎಂದು ಉತ್ತರಿಸುತ್ತಾನೆ. ಇನ್ನೊಬ್ಬ ಪಂಡಿತ ಮಹಾರಾಜಾ, ಅಂತಹ ಮೂರ್ಖನ ಸಹವಾಸವಾದರೆ ಆತನ ಮುಖಕ್ಕೆ ಕಪ್ಪು ಬಣ್ಣ ಬಳಿದು ಕಣ್ಣು ಕಟ್ಟಿ ಬಿಡಬೇಕು ಎಂದು ಸೂಚಿಸಿದ. ಮೂರ್ಖರನ್ನು ಕಂಡರೆ ಅವರನ್ನು ನಗರದಿಂದ ಹೊರ ಹಾಕಿ ಗಡಿಪಾರು ಮಾಡಬೇಕು ಎಂದು ಮತ್ತೊಬ್ಬ ಪಂಡಿತ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ.

ಅಕ್ಬರನ ಆಸ್ಥಾನದಲ್ಲಿ ಪ್ರತಿಯೊಬ್ಬ ಪಂಡಿತರು ತಮಗೆ ತಿಳಿದಂತೆ ಒಂದೊಂದು ರೀತಿಯ ಅಭಿಪ್ರಾಯಗಳನ್ನು ತಿಳಿಸಿದರು.

ಆದರೆ ಈ ಉತ್ತರದಿಂದ ಸಂತುಷ್ಟನಾಗದ ಅಕ್ಬರನು, ಬೀರಬಲ್ಲನ ಕಡೆ ತನ್ನ ನೋಟವನ್ನು ಬೀರಿದ. ಆಗ ಬೀರಬಲ್ಲನು ಮಹಾರಾಜ ನನಗೆ ನಾಲ್ಕು ದಿನಗಳ ಕಾಲಾವಕಾಶವನ್ನು ನೀಡಿರಿ ನಾನು ಸರಿಯಾದ ಉತ್ತರವನ್ನು ತಮಗೆ ನೀಡುತ್ತೇನೆ ಎಂದನು. ಮರುದಿನವೇ ಬೀರಬಲ್ಲನು ತನ್ನ ಪಕ್ಕದ ಗ್ರಾಮಕ್ಕೆ ಹೋಗಿ ಅಲ್ಲಿ ಕಟುಮಸ್ತಾದ ದೇಹವನ್ನು ಹೊಂದಿದ ಫೈಲ್ವಾನ್ ಒಬ್ಬನನ್ನು ಭೇಟಿ ಮಾಡಿದ. ಆ ಪೈಲ್ವಾನನನ್ನು ಬೀರಬಲ್ಲನು ತನ್ನ ಜೊತೆಯಲ್ಲಿ ಕರೆದುಕೊಂಡು ಬಂದು, ನೀನು ನನ್ನ ಜೊತೆ ಮೂರು ದಿನ ಬಿಟ್ಟು ಅಕ್ಬರನ ದರ್ಬಾರಿಗೆ ಬರಬೇಕು. ಅದಕ್ಕಾಗಿ ನೀನು ಮೂರು ದಿನಗಳ ಕಾಲ ನನ್ನ ಜೊತೆಯಲ್ಲಿರಬೇಕು ಎಂದನು. ಅಕ್ಬರನು ನಿನ್ನ ಬಳಿ ಏನೇ ಪ್ರಶ್ನೆಯನ್ನು ಕೇಳಿದರೂ ನೀನು ಮೂಕನಾಗಿ ನಿಲ್ಲಬೇಕು, ಯಾವುದೇ ಕಾರಣಕ್ಕೂ ನೀನು ಯಾವುದೇ ರೀತಿಯ ಉತ್ತರವನ್ನು ನೀಡಬಾರದು ಎಂದು ಆತನಿಗೆ ವಿವರಿಸಿ ಹೇಳಿದ.

ಅದರಂತೆಯೇ ನಿರ್ದಿಷ್ಟ ದಿನದಂದು ಬೀರಬಲ್ಲನು ಪೈಲ್ವಾನನಿಗೆ ಐಷಾರಾಮಿ ಪೋಷಾಕನ್ನು ತೊಡಿಸಿ ದರ್ಬಾರಿಗೆ ಕರೆದುಕೊಂಡು ಬಂದ. ಈತನನ್ನು ನೋಡಿದ ಆಸ್ಥಾನದ ಎಲ್ಲರಿಗೂ ಆಶ್ಚರ್ಯವಾಗಿತ್ತು. ಅಕ್ಬರನ ಸಭೆಗೆ ರಾಜಗಾಂಭೀರ್ಯದಿಂದ ಬಂದಾಗ ಆಸ್ಥಾನದಲ್ಲಿದ್ದ ಎಲ್ಲರೂ ಎದ್ದು ನಿಂತು ಆತನಿಗೆ ಗೌರವವನ್ನು ಸಲ್ಲಿಸಿ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತರು. ಪೈಲ್ವಾನನು ಬೀರಬಲ್‌ನ ಪಕ್ಕದಲ್ಲೇ ನಿಂತುಕೊಂಡಿದ್ದನ್ನು ನೋಡಿದ ಅಕ್ಬರನು ಆ ವ್ಯಕ್ತಿಯನ್ನು ಕಂಡು ಅಚ್ಚರಿಯಿಂದ ಈ ವ್ಯಕ್ತಿ ಯಾರೆಂದು ಬೀರಬಲ್ಲನನ್ನು ಕೇಳುತ್ತಾನೆ.

ಅದಕ್ಕೆ ಬೀರಬಲ್ಲನು ಮಹಾರಾಜ ನಾಲ್ಕು ದಿನಗಳ ಹಿಂದೆ ತಾವೊಂದು ಪ್ರಶ್ನೆಯನ್ನು ಕೇಳಿದ್ದಿರಿ, ನಿಮ್ಮ ಪ್ರಶ್ನೆಗೆ ಉತ್ತರವೇ ಈತ ಎಂದು ಹೇಳುತ್ತಾನೆ. ಅಕ್ಬರನು ಆಶ್ಚರ್ಯದಿಂದ ನನ್ನ ಪ್ರಶ್ನೆಗೂ ಈತನಿಗೂ ಏನು ಸಂಬಂಧ ಎಂದು ಕೇಳುತ್ತಾನೆ. ಆಗ ಬೀರಬಲ್ಲನು ಸಂಬಂಧವಿದೆ ಮಹಾರಾಜ, ಅಂದಿನ ಪ್ರಶ್ನೆಯನ್ನೇ ಈತನಿಗೆ ಮತ್ತೊಮ್ಮೆ ಕೇಳಿರಿ ನಿಮ್ಮ ಸಮಸ್ಯೆಗೆ ಸರಿಯಾದ ಉತ್ತರ ದೊರೆಯುತ್ತದೆ ಎಂದ. ಆಗ ಅಕ್ಬರನು ಈ ಪೈಲ್ವಾನನಿಗೆ 'ಮೂರ್ಖರ ಜೊತೆಯಲ್ಲಿ ಕೆಲಸ ಮಾಡುವ ಸಂದರ್ಭ ಬಂದರೆ ಏನು ಮಾಡಬೇಕು?' ಎಂದು ಪ್ರಶ್ನಿಸಿದ. ಆಗ ಆ ಪೈಲ್ವಾನನು ಕಿವಿ ಕೇಳಿಸದಂತೆ ಮೂಕನಾಗಿ ನಿಂತಿದ್ದ. ಮತ್ತೆ ಅದೇ ಪ್ರಶ್ನೆಯನ್ನು ಅಕ್ಬರನು ಸ್ವಲ್ಪ ಜೋರಾಗಿ ಕೇಳಿದ. ಆಗಲೂ ಆತ ಉತ್ತರಿಸದೆ ಕಿವುಡನಂತೆ ನಿಂತಿದ್ದ. ಮತ್ತೆ ಮತ್ತೆ ಆ ಪ್ರಶ್ನೆಯನ್ನು ಕೇಳಿದರೂ ಪೈಲ್ವಾನ ಯಾವುದೇ ಉತ್ತರವನ್ನು ನೀಡಲಿಲ್ಲ.

ಆಗ ಅಕ್ಬರನು ಬೀರಬಲ್‌ನಿಗೆ ಈತ ಏನದರೂ ಕಿವುಡನೇ? ನಾನು ಎಷ್ಟೇ ಪ್ರಶ್ನೆಯನ್ನು ಕೇಳಿದರೂ ಆತ ಉತ್ತರವನ್ನೇ ನೀಡುತ್ತಿಲ್ಲವಲ್ಲ ಎಂದು ಸಿಟ್ಟಿನಿಂದ ಕೇಳಿದ. ಆಗ ಬೀರಬಲ್ಲನು ಆ ಪೈಲ್ವಾನನು ತಮ್ಮ ಪ್ರಶ್ನೆಗೆ ಉತ್ತರವನ್ನು ನೀಡುತ್ತಿದ್ದಾನೆ. ಆದರೆ ತಾವೇ ಆತನ ಉತ್ತರವನ್ನು ಅರ್ಥ ಮಾಡಿಕೊಂಡಿಲ್ಲ, ಆತನ ಉತ್ತರ ಇಷ್ಟೇ ಮೂರ್ಖರ ಜೊತೆಯಲ್ಲಿ ಕೆಲಸ ಮಾಡುವ ಸಂದರ್ಭ ಬಂದರೆ ವಿನಾ ಚರ್ಚೆ ಮಾಡುವ ಬದಲು ಸುಮ್ಮನಿದ್ದು ಬಿಡುವುದು ಸೂಕ್ತ ಎಂದು ಬೀರಬಲ್ಲ ವಿವರಿಸಿದ. ಬೀರಬಲ್ಲನ ಉತ್ತರದಿಂದ ಅಕ್ಬರನು ಸಂತುಷ್ಟನಾಗಿ ಹತ್ತು ಬಂಗಾರದ ನಾಣ್ಯಗಳನ್ನು ಉಡುಗೊರೆಯಾಗಿ ನೀಡಿದ.

– ಸಂತೋಷ್ ರಾವ್ ಪೆರ್ಮುಡ,
ಪೆರ್ಮುಡ ಮನೆ, ಪಟ್ರಮೆ ಗ್ರಾಮ
ಮತ್ತು ಅಂಚೆ ಬೆಳ್ತಂಗಡಿ ತಾಲೂಕು,



# ಮಾಜಿ ಪ್ರಧಾನಿ ರಾಜೀವ ಗಾಂಧಿ ಪುಣ್ಯತಿಥಿ ಆಚರಣೆ



**ಉದಯರಶ್ಮಿ ನ್ಯೂಸ್**

ವಿಜಯಪುರ: ಭಾರತದ ಮಾಜಿ ಪ್ರಧಾನಿ ರಾಜೀವ ಗಾಂಧಿಯವರ 33ನೇ ಪುಣ್ಯತಿಥಿಯನ್ನು ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವುದರೊಂದಿಗೆ ವಿಜಯಪುರ ಜಿಲ್ಲಾ ಕಾಂಗ್ರೆಸ್ ಕಾರ್ಯಾಲಯದಲ್ಲಿ ಆಚರಿಸಲಾಯಿತು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಎಸ್. ಲೋಣಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾ ಗಾಂಧಿಯವರ ನಿಧನದ ನಂತರ ದೇಶದ ಪ್ರಧಾನ ಮಂತ್ರಿ ಜವಾಬ್ದಾರಿ ವಹಿಸಿಕೊಂಡ ರಾಜೀವ ಗಾಂಧಿಯವರು ಶ್ರೀ ರಾಜೀವ ಗಾಂಧಿಯವರು ಪಂಚಾಯತ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದರು. ಇಂದು ನಾವೆಲ್ಲರೂ ಬಳಸುತ್ತಿರುವ ಮೊಬೈಲ್ ಫೋನ ಪರಿಚಯಿಸಿದ್ದಲ್ಲದೆ ಕಂಪ್ಯೂಟರ್‌ಗಳನ್ನು ಬಳಸಲು ಕಾರಣೀಭೂತರಾದರು. ಅದರಂತೆ 18 ವರ್ಷದ ಯುವಕ ಯುವತಿಯರಿಗೆ ಮತದಾನ ಹಕ್ಕನ್ನು ನೀಡಿದರು. ದೇಶಕ್ಕೆ ಅವರ ಕೊಡುಗೆ ಅಪಾರವಾದದ್ದು ಹಾಗೂ ಮಾದರಿಯಾಗಿದೆ. ತಮಿಳುನಾಡಿನ ಪೆರಂಬೂರಿನಲ್ಲಿ ಎಲ್‌ಟಿಟಿಇ ಉಗ್ರರ ಕೃತ್ಯಕ್ಕೆ ಬಲಿಯಾದರು. ಅವರ ಆದರ್ಶಗಳು, ದೇಶದ ಜನತೆಯ ಬಗೆಗಿನ ಕಾಳಜಿ ಅವಿಸ್ಮರಣೀಯವಾಗಿದೆ ಹಾಗೂ ಅವರೊಬ್ಬ ದೂರದೃಷ್ಠಿಯುಳ್ಳ ನಾಯಕರಾಗಿದ್ದರು ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿಜಯಪುರ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ರಾಜು ಆಲಗೂರ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ವೈಜನಾಥ ಕರ್ಪೂರಮಠ, ಕೆ.ಎಫ್. ಅಂಕಲಗಿ, ಡಿ.ಎಚ್. ಕಲಾಲ, ಸಾಹೇಬಗೌಡ ಬಿರಾದಾರ ಮುಂತಾದವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಸದಸ್ಯರಾದ ಅಬ್ದುಲ್‌ಹಮೀದ ಮುಶ್ರೀಫ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರುಗಳಾದ ಚಾಂದಸಾಬ ಗಡಗಲಾವ, ಸುಭಾಷ್ ಕಾಲೇಬಾಗ್, ಮಹಾದೇವಿ ಗೋಕಾಕ, ಜಲನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಆರತಿ ಶಹಾಪೂರ, ವಿದ್ಯಾವತಿ ಅಂಕಲಗಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ವಸಂತ ಹೊನಮೊಡೆ, ಚನಬಸಪ್ಪ ನಂದರಗಿ, ತಮ್ಮಣ್ಣ ಮೇಲಿನಕೇರಿ, ಶರಣಪ್ಪ ಯಕ್ಕುಂಡಿ, ಎಂ.ಜಿ. ಯಂಕಂಚಿ, ದೇಸು ಚವ್ಹಾಣ, ಎಂ.ಎಂ ಮುಲ್ಲಾ, ಅಫ್ತಾಬ್ ಖಾದ್ರಿ ಇನಾಮದಾರ,

ಅಂಗ ಘಟಕಗಳ ಅಧ್ಯಕ್ಷರುಗಳಾದ ಅಮಿತ ಚವ್ಹಾಣ, ಲಾಲಸಾಬ ಕೊರಬು, ಫಿರೋಜ ಶೇಖ, ಮಹಾದೇವ ಜಾಧವ, ಇಲಿಯಾಸ ಸಿದ್ದಿಕಿ, ಅಬ್ದುಲ್‌ಪೀರಾ ಜಮಖಂಡಿ, ತಾಜುದ್ದೀನ ಖಲೀಫಾ, ಅಬುಬಕರ ಕೆಂಬಾವಿ, ಕಲ್ಲಪ್ಪ ಪರಶೆಟ್ಟಿ, ಮಹ್ಮದ ಮುಲ್ಲಾ, ಕಾಶಿಬಾಯಿ ಹಡಪದ, ಮಹೇಶ ಶಹಾಪೂರ, ಅಂಬಣ್ಣ ಕಲಮನಿ, ಬಾಬುಸಾಬ ಯಾಳವಾರ, ನಾಗರಾಜ ಲಂಬು, ದಿಲೀಪ ಪ್ರಭಾಕರ, ಅಶೋಕ ಕಾಂಬಳೆ ಮುಂತಾದ ಪಕ್ಷದ ಕಾರ್ಯಕರ್ತರು ಹಾಜರಿದ್ದರು.

# ಮೇ.27ರಿಂದ ADHD ಕಾಯಿಲೆಗೆ ಉಚಿತ ತಪಾಸಣೆ ಮತ್ತು ಚಿಕಿತ್ಸೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಮಕ್ಕಳಲ್ಲಿ ಕಂಡು ಬರುವ ಚಂಚಲತೆ ಮತ್ತು ಅತೀ ಚಟುವಟಿಕೆಯ(ಂಆಊಆ) ಕಾಯಿಲೆಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ.ಎಸ್ ಆಯುರ್ವೇದ ಮಹಾವಿದ್ಯಾಲಯ ಆಸ್ಪತ್ರೆಯಲ್ಲಿ ಮೇ 27 ರಿಂದ ಜೂನ್ 1 ರ ವರೆಗೆ ನಡೆಯಲಿದೆ ಎಂದು ಕಾಲೇಜಿನ ಪ್ರಾಚಾರ್ಯ ಡಾ. ಸಂಜಯ ಕಡ್ಲಿಮಟ್ಟಿ ತಿಳಿಸಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ನೀಡಿರುವ ಅವರು, ಕಾಲೇಜಿನ ಕೌಮಾರಭೃತ್ಯ ವಿಭಾಗದ ವತಿಯಿಂದ ಈ ಶಿಬಿರ ಆಯೋಜಿಸಲಾಗಿದೆ.

ಮಕ್ಕಳು ಒಂದೇ ಜಾಗದಲ್ಲಿ ಕುಳಿತುಕೊಳ್ಳದಿರುವುದು, ಹೋಂ ವರ್ಕ್ ಅಥವಾ ಶಾಲೆಯ ಚಟುವಟಿಕೆಗಳು ಸೇರಿದಂತೆ ದಿನನಿತ್ಯದ ಕೆಲಸಗಳನ್ನು ಮಾಡಲು ಹಿಂಜರಿಯುವುದು, ದೈನಂದಿನ ಚಟುವಟಿಕೆಗಳಲ್ಲಿ ಬಲು ಬೇಗನೆ ಬೇಸರಗೊಳ್ಳುವುದು ಅಟೇನ್ಷನ್ ಡೆಫಿಸಿಟ್ ಹೈಪರ್‌ಆಕ್ಟಿವಿಟಿ ಡಿಸರ್ಡರ್(ಂಆಊಆ) ಕಾಯಿಲೆಯ ಪ್ರಮುಖ ಲಕ್ಷಣಗಳಾಗಿವೆ. ಇಂಥ ಸಮಸ್ಯೆಗಳನ್ನು ಎದುರಿಸುತ್ತಿರುವ ಮಕ್ಕಳಿಗೆ ಈ ಶಿಬಿರದಲ್ಲಿ ಉಚಿತ ತಪಾಸಣೆ ಮತ್ತು ಔಷಧಿ ವಿತರಣೆ ನಡೆಯಲಿದೆ. ಪಾಲಕರು ಇದರ ಸದುಪಯೋಗ ಪಡದುಕೊಳ್ಳಬೇಕು ಎಂದು ಡಾ. ಸಂಜಯ ಕಡ್ಲಿಮಟ್ಟಿ ಅವರು ತಿಳಿಸಿದ್ದಾರೆ.

ಆಸಕ್ತರು ಮೊ. ಸಂ. 8197378138ಗೆ ಸಂಪರ್ಕಿಸಲು ಕೋರಲಾಗಿದೆ.

# ಕುಸ್ತಿಪಟುಗಳ ಸಂಖ್ಯೆ ಕುಸಿತ ಕಳವಳಕಾರಿ :ಪಟ್ಟಣಶೆಟ್ಟಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕುಸ್ತಿ ಪಂದ್ಯಾವಳಿ ವಿಶ್ವದ ಅತ್ಯಂತ ಪ್ರಾಚೀನ ಕ್ರೀಡೆಯಾಗಿದೆ. ಕುಸ್ತಿ ಭಾರತದಲ್ಲಿ ವೈಭವಯುತ ಇತಿಹಾಸ ಹಾಗೂ ಜನಪ್ರಿಯತೆ ಹೊಂದಿದೆ ಎಂದು ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಅಭಿಪ್ರಾಯ ವ್ಯಕ್ತಪಡಿಸಿದರು.

ಹಿಟ್ನಳ್ಳಿ ಗ್ರಾಮದ ದ್ಯಾಮಗಂಗಾ ಹಾಗೂ ಮಾರುತೇಶ್ವರ ಜಾತ್ರೆ ನಿಮಿತ್ತ ಏರ್ಪಡಿಸಿದ್ದ ಕುಸ್ತಿ ಪಂದ್ಯಾವಳಿಯು ಉದ್ಘಾಟಿಸಿ ಮಾತನಾಡುತ್ತಾ, ಒಲಂಪಿಕ್ಸ್ ದಲ್ಲಿ ಕುಸ್ತಿ ಪ್ರತಿಷ್ಠಿತ ಕ್ರೀಡೆಯಾಗಿದೆ ಮೊದಮೊದಲು ಇದನ್ನು ಮಲ್ಲಯುದ್ಧವೆಂದು ಕರೆಯಲಾಗುತ್ತಿತ್ತು. ಇಂದು ಭಾರತಿಯ ಕ್ರೀಡಾ ಪ್ರಾಧಿಕಾರ ಇಂತಹ ಅಪ್ರತಿಮ ಕುಸ್ತಿಪಟುಗಳಿಗೆ ತರಬೇತಿ ನೀಡಿ ಪ್ರೋತ್ಸಾಹಿಸುತ್ತಿದೆ. ಕುಸ್ತಿಪಟುಗಳ ಸಂಖ್ಯೆ ಕುಸಿಯುತ್ತಿರುವುದು ಅತ್ಯಂತ ಕಳವಳಕಾರಿ ಸಂಗತಿ ಎಂದರು. ಮಹಿಳಾ ಕುಸ್ತಿಪಟುಗಳು ಸಹ ಅಂತರಾಷ್ಟ್ರೀಯ ಮಟ್ಟದ ಪ್ರಶಸ್ತಿಯನ್ನು ಗಳಿಸಿದ್ದಾರೆ. ಶಿಕ್ಷಣದ ಜೊತೆಗೆ ಕ್ರೀಡೆಗೆ ಅವಕಾಶ ಹಾಗೂ ಪೋತಾಹ ಅಗತ ಎಂದರು.



ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಹಾಸಿಂಪೀರ್ ವಾಲಿಕಾರ್ ಅಧ್ಯಕ್ಷ ವಹಿಸಿ ಮಾತನಾಡುತ್ತಾ, ಕರ್ನಾಟಕದಲ್ಲಿ ದಸರಾ ಕುಸ್ತಿಗಳು ಜಗತ್ಪಸಿದ್ಧವಾಗಿವೆ.

ಸಂಘಟಕರಾದ ಶ್ರೀಕಾಂತ್ ಚೌದರಿ, ಸಿದ್ದು ಪವಾರ, ಜಗನಾಥ ಚೌದ್ರಿ, ಚಂದ್ರಶೇಖರ್ ಮಲಗಾಣ, ಅಶೋಕ್ ಬಗಲಿ, ರಾಜೇಂದ್ರ ಬಿರಾದಾರ್ ಅತಿಥಿಗಳನ್ನು ಗೌರವಿಸಿದರು.

ಕಾರ್ಯಕ್ರಮದಲ್ಲಿ ಬಸವನಗೌಡ ಬಿರಾದಾರ್, ಮಲ್ಲಪ್ಪ ಕತ್ನಳ್ಳಿ, ಪ್ರಕಾಶ್ ಚಿಕ್ಕಲಕಿ, ಈರಣಗೌಡ ಬಿರಾದಾರ, ರವಿ ಬಿರಾದಾರ್, ದುಂಡಪ್ಪ ಬಗಲಿ, ಮಲ್ಲಪ್ಪ ಬಾವಿಕಟ್ಟಿ, ಬಸನಗೌಡ ಬಿರಾದಾರ್, ವಿಠ್ಠಲ್ ಸಾರವಾಡ, ಈರಪ್ಪ ಸಾವಳಗಿ, ಮಹೇಶ್ ಮಾಲ್ಗರ್, ಮಲ್ಲಿಕಾರ್ಜುನ್ ಕಂಬಾರ್, ರಾಮ್ ಗೊಂಡ್ ಪಡಕೋಟಿ, ಶ್ರೀಕಾಂತ್ ಗೊಂಗಾಡಿ, ಸಿದ್ದನಗೌಡ ಬಿರಾದಾರ್, ಸುಭಾಷ, ಗೌಡಪ್ಪ ಬೆನಕಟ್ಟಿ, ಲಚ್ಚಪ್ಪ ಬಗಲಿ,ಯಲ್ಲಪ್ಪ ದುರ್ಗೋಗೊಳ, ಖಾಣಪ್ಪ ಚಿತ್ತಾಪುರ, ಚಂದ್ರಶೇಖರ್ ಇಂಡಿ, ಸುರೇಶ್ ಇಂಡಿ, ಅಪ್ಪು ನಾಟಿಕಾರ್ ಮುಂತಾದವರು ಉಪಸ್ಥಿತರಿದ್ದರು.

# ಹುಬ್ಬಳ್ಳಿಯ ಅಂಜಲಿ ಮನೆಗೆ ಶಾಸಕ ಯತ್ನಾಳ ಭೇಟಿ



**ಉದಯರಶ್ಮಿ ನ್ಯೂಸ್**

ವಿಜಯಪುರ: ಹುಬ್ಬಳ್ಳಿ ನಗರದಲ್ಲಿ ಇತ್ತೀಚಿಗೆ ಕೊಲೆಯಾದ ಕು. ಅಂಜಲಿ ಅಂಬಿಗೇರ ಅವರ ಮನೆಗೆ ನಗರ ಶಾಸಕರಾದ ಬಸನಗೌಡ ರಾ.ಪಾಟೀಲ ಯತ್ನಾಳ ಅವರು ಮಂಗಳವಾರ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿ, ಆತ್ಮಸ್ಥೈರ್ಯ ತುಂಬಿದರು.




# ಮಾಹಿತಿ ನೀಡಲು ಮತ್ತೆ ನಿರಾಕರಿಸಿದ ಎಸ್‌ಬಿಐ




**ಉದಯರಶ್ಮಿ ನ್ಯೂಸ್**

ನವದೆಹಲಿ: ದೇಶದಲ್ಲಿ ಭಾರೀ ಸದ್ದು ಮಾಡಿದ್ದ ಚುನಾವಣಾ ಬಾಂಡ್‌ಗೆ ಸಂಬಂಧಿಸಿದಂತೆ ಎಸ್‌ಒಪಿ ಮಾಹಿತಿಯನ್ನು ನೀಡಲು ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತೆ ನಿರಾಕರಿಸಿದ್ದು, ಕೇಂದ್ರ ಮಾಹಿತಿ ಆಯೋಗಕ್ಕೆ (ಸಿಐಸಿ) ನಿರಾಕರಣೆಯ ವಿರುದ್ಧ ಮೇಲ್ಮನವಿ ಸಲ್ಲಿಸಲು ಆರ್‌ಟಿಐ ಕಾರ್ಯಕರ್ತೆ ಅಂಜಲಿ ಭಾರದ್ವಾಜ್ ಮುಂದಾಗಿದ್ದಾರೆ.

ಮಾಹಿತಿ ಹಕ್ಕು ಕಾಯಿದೆಯಡಿ ಸಲ್ಲಿಸಲಾದ ಮೊದಲ ಮೇಲ್ಮನವಿಗೆ ಪ್ರತಿಕ್ರಿಯೆಯಾಗಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಚುನಾವಣಾ ಬಾಂಡ್‌ಗಳ ಮಾರಾಟ ಮತ್ತು ನಗದೀಕರಣ ಕುರಿತಂತೆ ಶಾಖೆಗಳಿಗೆ ನೀಡಿದ ಎ□□□ಪಿ (ಸ್ಟಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್ಸ್) ಪ್ರತಿಯನ್ನು ಒದಗಿಸಲು ಮತ್ತೆ ನಿರಾಕರಿಸಿದೆ. ಮಾಹಿತಿ ಹಕ್ಕು ಕಾಯಿದೆಯಡಿ ಕೋರಲಾದ ಮಾಹಿತಿಯನ್ನು ಬ್ಯಾಂಕ್ "ಕಮರ್ಷಿಯಲ್ ಕಾನ್ಫಿಡೆನ್ಸ್" ಆಗಿ ಇರಿಸಿಕೊಂಡಿದೆ ಮತ್ತು ಅದು "ಬ್ಯಾಂಕ್‌ನ ಬೌದ್ಧಿಕ ಆಸ್ತಿ" ಎಂದು ಮಾಹಿತಿ ನಿರಾಕರಣೆಗೆ ಬ್ಯಾಂಕ್ ಕಾರಣ ನೀಡಿದೆ. ಮೇಲಾಗಿ ಆಂತರಿಕ ಮಾರ್ಗಸೂಚಿಗಳು ಚುನಾವಣಾ ಬಾಂಡ್ ಕುರಿತಂತೆ ಕಾರ್ಯನಿರ್ವಹಿಸುವ ಸಿಬ್ಬಂದಿಗಾಗಿ ಮಾತ್ರ ಆಗಿವೆ ಎಂದೂ ಬ್ಯಾಂಕ್ ಹೇಳಿದೆ.

ಉದಯರಶ್ಮಿ

ಪ್ರತಿ ಮನೆ-ಮನದ ಸಂಗಾತಿ

# ಎಸ್.ಕೆ.ಬೆಳ್ಳುಬ್ಬಿಗೆ ಬಿಜೆಪಿ ಟಿಕೆಟ್ ನೀಡಲು ಕಲ್ಲಿನಾಥ ಶ್ರೀ ಆಗ್ರಹ



**ಉದಯರಶ್ಮಿ ನ್ಯೂಸ್**

ವಿಜಯಪುರ: ಶಾಸಕರ ಮೂಲಕ ನೇಮಕವಾಗುವ ವಿಧಾನ ಪರಿಷತ್ ಸದಸ್ಯರ 11 ಸ್ಥಾನಗಳಿಗೆ ಚುನಾವಣಾ ಆಯೋಗ ಜೂ.13 ರಂದು ಚುನಾವಣೆ ಘೋಷಿಸಿದ್ದು, ಬಿಜೆಪಿಯಿಂದ ಹಿರಿಯ ಮಾಜಿ ಸಚಿವ, ರಾಜ್ಯ ಗಾಣಿಗ ಸಮುದಾಯದ ಪ್ರಭಾವಿ ನಾಯಕರಾದ ಎಸ್.ಕೆ. ಬೆಳ್ಳುಬ್ಬಿ ಅವರಿಗೆ ಬಿಜೆಪಿ ಟಿಕೇಟ್ ನೀಡಬೇಕೆಂದು ದಿಗಂಬರೇಶ್ವರ ಸಂಸ್ಥಾನಮಠದ ಕಲ್ಲಿನಾಥ ಮಹಾಸ್ವಾಮೀಜಿ ಬಿಜೆಪಿ ಪಕ್ಷದ ವರಿಷ್ಠರಿಗೆ ಒತ್ತಾಯಿಸಿದರು.

ವಿಜಯಪುರದಲ್ಲಿ ಮಂಗಳವಾರ ಗಾಣಿಗ ಸಮುದಾಯದ ಜಿಲ್ಲಾ ನಾಯಕರೊಂದಿಗೆ ಜಂಟಿ ಸುದ್ದಿಗೋಷ್ಠಿ ನಡೆಸಿ ಕಲ್ಲಿನಾಥ ಸ್ವಾಮೀಜಿ ಮಾತನಾಡಿದರು. ರಾಜ್ಯದಲ್ಲಿ ಸುಮಾರು 80 ಲಕ್ಷದಷ್ಟು ಜನಸಂಖ್ಯೆ ಹೊಂದಿರುವ ಗಾಣಿಗ ಸಮಾಜವು ಮಾಜಿ ಪ್ರಧಾನಿ ದಿ. ಅಟಲ್ ಬಿಹಾರಿ ವಾಜಪೇಯಿ, ಪ್ರಧಾನಿ ನರೇಂದ್ರ ಮೋದಿಜಿ ಹಾಗೂ ಮಾಜಿ ಸಿಎಂ ಯಡಿಯೂರಪ್ಪ ಅವರ ಅಭಿವೃದ್ಧಿ ಕಾರ್ಯಗಳು ಹಾಗೂ ನಾಯಕತ್ವ ಗುಣಗಳನ್ನು ಮೆಚ್ಚಿಕೊಂಡು ಹಲವಾರು ದಶಕಗಳಿಂದ ಗಾಣಿಗ ಸಮಾಜ ಬಿಜೆಪಿ ಬೆಂಬಲಿಸಿಕೊಂಡು ಬಂದಿದೆ.

ರಾಜ್ಯದಲ್ಲಿ ಗಾಣಿಗ ಸಮುದಾಯದ ಪ್ರಭಾವಿ ನಾಯಕರಾಗಿರುವ ಹಿರಿಯ ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿಯವರು ಸಂತ್ರಸ್ತರು, ರೈತರ ಪರ ಹೋರಾಟಗಳ ಮೂಲಕವೇ ಮಂಡಲ ಪಂಚಾಯಿತಿಯಿಂದ ಸಚಿವ ಸ್ಥಾನದವರೆಗೂ ಪರಿಶ್ರಮದಿಂದ ಬೆಳೆದು ಬಂದು ಇಂದು ಬಿಜೆಪಿ ಪಕ್ಷಕ್ಕೆ ಶಕ್ತಿಯಾಗಿ ನಿಂತಿದ್ದಾರೆ. ಮೂರು ಬಾರಿ ವಿಜಯಪುರ ಜಿಲ್ಲಾಧ್ಯಕ್ಷರಾಗಿ ಜಿಲ್ಲೆಯಲ್ಲಿ ಸಮರ್ಥವಾಗಿ ಪಕ್ಷ ಸಂಘಟನೆ ಮಾಡಿ ಹೆಚ್ಚಿನ ಶಾಸಕ ಸ್ಥಾನಗಳನ್ನು ಗೆಲ್ಲಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಅವರು ಸಚಿವರಾಗಿದ್ದ ವೇಳೆ ಕೇಂದ್ರ ಬಿಜೆಪಿ ಸರ್ಕಾರದಲ್ಲಿ ಹಿರಿಯ ಸಚಿವರೊಂದಿಗೆ ಚರ್ಚಿಸಿ ಮನವೊಲಿಸಿ ವಿಜಯಪುರ ಜಿಲ್ಲೆಗೆ ಉಷ್ಣ ವಿದ್ಯುತ್ ಸ್ಥಾವರ ತರುವ ಮೂಲಕ ವಿದ್ಯುತ್ ವಿಚಾರದಲ್ಲಿ ರಾಜ್ಯವನ್ನು ಸ್ವಾಲಂಬಿಯನ್ನಾಗಿಸಿದ್ದಾರೆ.

ಬೆಳ್ಳುಬ್ಬಿಯವರು ದೇಶದಲ್ಲೇ ದೊಡ್ಡದಾದ ಕೊರ್ತಿ–ಕೊಲ್ಹಾರ ಸೇತುವೆ ಸರದಾರರಾಗಿ, ಬಾಗಲಕೋಟೆಯಲ್ಲಿ ತೋಟಗಾ–ರಿಕೆ ವಿವಿ ಸ್ಥಾಪಿಸಿದಲ್ಲದೇ ಅವಳಿ ಜಿಲ್ಲೆ ಹಾಗೂ ರಾಜ್ಯದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಮೂಲಕ ನೈಜ್ಯ ಅಭಿವೃದ್ಧಿ ಹರಿಕಾರರಾಗಿದ್ದಾರೆ. ಕಳೆದ ಲೋಕಸಭೆ ಚುನಾವಣೆ ಸೇರಿ ಎಲ್ಲಾ ಚುನಾವಣೆಗಳಲ್ಲಿ ರಾಜ್ಯಾದ್ಯಂತ ಪ್ರವಾಸ ಮಾಡಿ ಬಿಜೆಪಿ ಪಕ್ಷದ ಅಭ್ಯರ್ಥಿಗಳ ಪರವಾಗಿ ಪ್ರಚಾರ ಕೈಗೊಳ್ಳುವ ಮೂಲಕ ಶಕ್ತಿ ತುಂಬಿದ್ದಾರೆ. ಗಾಣಿಗ ಸಮುದಾಯ ಎಂದಿಗೂ ಬಿಜೆಪಿ ಪರವಾಗಿರುವ ಸಮಾಜ. ಆದರೆ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಗಾಣಿಗ ಸಮುದಾಯದ ನಾಯಕರಾದ ಲಕ್ಷ್ಮಣ ಸವದಿಯವರಿಗೆ ಟಿಕೇಟ್ ಕೊಡದಿರುವ ಕಾರಣ ರಾಜ್ಯದಲ್ಲಿ ಗಾಣಿಗ ಸಮುದಾಯದ ಮತಗಳು ವಿಭಜನೆಯಾಗಿವೆ ಎಂದು ಇಂಟಲಿಜೆನ್ಸ್ ರಿಪೋರ್ಟ್ ನೀಡಿತ್ತು.

ರಾಜ್ಯ ಬಿಜೆಪಿ ಪಕ್ಷದಲ್ಲಿ ಸದ್ಯ ಗಾಣಿಗ ಸಮಾಜದ ಒಬ್ಬರೂ ಶಾಸಕರು, ಎಂಎಲ್ಸಿಗಳಿಲ್ಲ. ರಾಜ್ಯದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರಲು ದೊಡ್ಡ ಸಮುದಾಯವಾದ ಗಾಣಿಗ ಸಮಾಜದ ಸಂಪೂರ್ಣ ಬೆಂಬಲ ಅತ್ಯಗತ್ಯವಾಗಿದೆ. ಹಾಗಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾಜಿ ಸಿಎಂ ಯಡಿಯೂರಪ್ಪ, ರಾಷ್ಟ್ರೀಯ ನಾಯಕರಾದ ಜೆ ಪಿ ನಡ್ಡಾ, ಪ್ರಧಾನಿ ಮೋದಿ, ಅಮೀತ್ ಶಾ ಎಲ್ಲರೂ ಸೇರಿ ಈ ಎಂಎಲ್ಸಿ ಚುನಾವಣೆಯಲ್ಲಿ ಬಿಜೆಪಿಯಿಂದ ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿಯವರಿಗೆ ಟಿಕೇಟ್ ನೀಡಿ ಮತ್ತೆ ರಾಜ್ಯದಲ್ಲಿ ಗಾಣಿಗ ಸಮುದಾಯದ ಪೂರ್ಣ ಬೆಂಬಲ ಪಡೆಯುವ ಕೆಲಸ ಮಾಡಬೇಕು ಎಂದು ಕಲ್ಲಿನಾಥ ಸ್ವಾಮೀಜಿ ಒತ್ತಾಯಿಸಿದರು.

ಗಾಣಿಗ ಸಮಾಜದ ಹಿರಿಯ ನಾಯಕರಾದ ಹೆಚ್. ಆರ್. ಉಟಗಿಯವರು ಮಾತನಾಡಿ, ಮಾಜಿ ಸಚಿವ ಎಸ್.ಕೆ. ಬೆಳ್ಳುಬ್ಬಿ ಹುಟ್ಟು ಹೋರಾಟಗಾರರು, ಮಂಡಲ ಪಂಚಾಯತಿಯಿಂದ ಸಚಿವರಾದರೂ ರೈತ ನಾಯಕರಾಗೇ ಗುರುತಿಸಿಕೊಂಡವರು. ರಾಜ್ಯದಲ್ಲಿ ಬಿಜೆಪಿ ಪಕ್ಷ ಸಂಘಟನೆಗೆ ಸಾಕಷ್ಟು ಶ್ರಮಿಸಿದ್ದಾರೆ. ಮೇಲಾಗಿ ಇಡಿ ನಮ್ಮ ಗಾಣಿಗ ಸಮುದಾಯ ಅವರ ಬೆನ್ನಿಗಿದೆ. ವಿಜಯಪುರ ಜಿಲ್ಲಾ ರಾಜಕಾರಣದಲ್ಲಿ ಗಾಣಿಗ ಸಮಾಜ ನಿರ್ಣಾಯಕ ಪಾತ್ರ ವಹಿಸಲಿದೆ. ಲೋಕಸಭಾ ಚುನಾವಣೆಯಲ್ಲಿ ಗಾಣಿಗರು ನೂರಕ್ಕೆ ತೊಂಬತ್ತರಷ್ಟು ಬಿಜೆಪಿಗೆ ಬೆಂಬಲಿಸಿದ್ದಾರೆ. ಚುನಾವಣೆ ಘೋಷಣೆಯಾಗಿರುವ 11 ಎಂಎಲ್ಸಿ ಸ್ಥಾನಗಳಲ್ಲಿ ಬಿಜೆಪಿಗೆ ಸುಲಭವಾಗಿ ಮೂರು ಸ್ಥಾನಗಳು ಸಿಗಲಿದ್ದು, ಅದರಲ್ಲಿ ಒಂದು ಸ್ಥಾನಕ್ಕೆ ನಮ್ಮ ನಾಯಕ ಎಸ್.ಕೆ.ಬೆಳ್ಳುಬ್ಬಿಯವರಗೆ ನೀಡಬೇಕೆಂದು ಹೆಚ.ಆರ್.ಉಟಗಿ ಆಗ್ರಹಿಸಿದರು.

ಈ ವೇಳೆ ಬಿಜೆಪಿ ಮುಖಂಡರಾದ ಪ್ರಕಾಶ ಹಿಟ್ನಳ್ಳಿ, ಶರಣು ಕಾಖಂಡಕಿ, ಬಸವರಾಜ ಹಳ್ಳಿ, ಸಂತೋಷ ಕಕ್ಕಳಮೇಲಿ, ಹುಚ್ಚಪ್ಪ ಬಾಟಿ, ಶ್ರೀಮಂತ ಹಂಗರಗಿ, ಮಂಜುನಾಥ ತುಂಬರಮಟ್ಟಿ, ಆನಂದ ಬಿಸ್ನಗೊಂಡ ಸೇರಿದಂತೆ ಹಲವು ಪ್ರಮುಖರಿದ್ದರು.

# ಕೃಷಿ ಹೊಂಡದಲ್ಲಿ ಬಿದ್ದು ಇಬ್ಬರು ಬಾಲಕರು ಸಾವು



**ಉದಯರಶ್ಮಿ ನ್ಯೂಸ್**

ಇಂಡಿ: ಕೃಷಿ ಹೊಂಡದಲ್ಲಿ ಬಿದ್ದು ಇಬ್ಬರು ಬಾಲಕರು ಸಾವನ್ನಪ್ಪಿರುವ ಘಟನೆ ಜಿಲ್ಲೆಯ ಇಂಡಿ ಪಟ್ಟಣದ ದೇಶಪಾಂಡೆ ತಾಂಡಾದಲ್ಲಿ ನಡೆದಿದೆ.

ಇಬ್ಬರು ಬಾಲಕರು ಕೃಷಿ ... ಈಜಲು ಬಾರದೇ ಅಮಿತ ರಾಠೋಡ(12), ಸುದೀಪ ಜಾಧವ್ (13) ಮೃತಪಟ್ಟಿರುವ ದುರ್ದೈವಿಗಳು. ಸ್ಥಳಕ್ಕೆ ಇಂಡಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಇಂಡಿ ಶಹರ್ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

# 9ನೇ ತರಗತಿಯ 15 ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ತಾಲೂಕಿನ ಹುಲ್ಲೂರು ಗ್ರಾಮದ ಎಸ್. ಎನ್.ಡಿ ನ್ಯಾಶನಲ್ ಪಬ್ಲಿಕ್ ಶಾಲೆಯಲ್ಲಿ 2024–25 ನೇ ಸಾಲಿನ 9ನೇ ತರಗತಿಯ 15 ವಿದ್ಯಾರ್ಥಿಗಳನ್ನು ಉಚಿತವಾಗಿ ಪ್ರವೇಶ ಪಡೆದುಕೊಳ್ಳಲು ಸಂಸ್ಥೆ ನಿರ್ಧರಿಸಿದೆ ಎಂದು ಅಧ್ಯಕ್ಷ ಎಂ. ಎಸ್.ಕೊಪ್ಪ ತಿಳಿಸಿದರು.

ಈ ಕುರಿತು ಸುದ್ದಿಗಾರರೊಂದಿಗೆ ಮತನಾಡಿದ ಅವರು ಪರಮ ಪೂಜ್ಯ ಚನ್ನಬಸವ ಮಹಾಸ್ವಾಮಿಗಳ ಮಹಾದೇಶದಂತೆ ಈ ನಿರ್ಧಾರ ಕೈಗೊಂಡಿದ್ದು, ವಿದ್ಯಾರ್ಥಿಗಳು ಉಚಿತ ಪ್ರವೇಶ ಪಡೆಯಲು ಮೇ25 ರಂದು ಪರೀಕ್ಷೆಯೊಂದನ್ನ ಆಯೋಜಿಸಲಾಗಿದೆ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಮೊದಲ 15 ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ಪಡೆಯುವದಾಗಿ ತಿಳಿಸಿದರು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದು : 9611075173, 8088435282

# ಬುದ್ದ ಪ್ರಜ್ಞೆಯ ಬೆಳಕಿನಲ್ಲಿ ಪಾಕಿಸ್ತಾನದ ದುಸ್ಥಿತಿ ಕಂಡಾಗ




**ಉದಯರಶ್ಮಿ ದಿನಪತ್ರಿಕೆ**

ಸರ್ವೇ ಜನೋ ಸುಖಿನೋ ಭವಂತು..

ನಮ್ಮ ನೆರೆಯ ದೇಶ ಮತ್ತು ಒಂದು ಕಾಲದ ನಮ್ಮದೇ ದೇಶದ ಭಾಗವಾಗಿದ್ದ ಪಾಕಿಸ್ತಾನ ಇತ್ತೀಚಿನ ಸುದ್ದಿಗಳ ಪ್ರಕಾರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ ಮತ್ತು ದಿವಾಳಿತನದ ಅಂಚಿನಲ್ಲಿದೆ..

ದೇಶವೇ ಇರಲಿ, ವೈಯಕ್ತಿಕ ಬದುಕೇ ಇರಲಿ, ನಮ್ಮ ಕ್ರಿಯೆ ಪ್ರತಿಕ್ರಿಯೆಗಳು ನಮ್ಮ ಜೀವನಮಟ್ಟವನ್ನು ನಿರ್ಧ–ರಿಸುತ್ತದೆ. ಅಪರೂಪದ ಕೆಲವು ಆಕಸ್ಮಿಕ ಸಂದರ್ಭಗಳಲ್ಲಿ ಮಾತ್ರ ಇದಕ್ಕೆ ಅಪವಾದ ಇರಬಹುದು..

ಧರ್ಮದ ಆಧಾರದ ಮೇಲೆ ದೇಶದ ನಿರ್ಮಾಣ, ಭಯೋತ್ಪಾದನೆಗೆ ಸಹಕಾರ, ಕೋವಿಡ್ ವೈರಸ್ ದಾಳಿ, ಅಮೇರಿಕ ದೇಶದ ವಿರೋಧದ ಕಾರಣದಿಂದ ಅವರ ನೆರವಿನ ಖೋತಾ, ದೇಶದ ರಾಜಕಾರಣಿಗಳ ಭ್ರಷ್ಟಾಚಾರ, ರಾಜಕೀಯ ಅಸ್ಥಿರತೆ ಮುಂತಾದ ಅನೇಕ ಕಾರಣಗಳಿಗಾಗಿ ಅದು ಈ ಪರಿಸ್ಥಿತಿ ತಲುಪಿರಬಹುದು..

ಇದು ಸಹ ಶಾಶ್ವತವೇನು ಅಲ್ಲ. ದೇಶ ತಪ್ಪುಗಳನ್ನು ತಿದ್ದಿಕೊಂಡು ಮುನ್ನಡೆದರೆ ಮತ್ತೆ ಕೆಲವೇ ವರ್ಷಗಳಲ್ಲಿ ಸುಸ್ಥಿತಿಗೆ ಮರಳಬಹುದು. ಹಾಗಾಗಲಿ ಎಂದು ಶುಭ ಹಾರೈಸುತ್ತಾ..



ಮುಖ್ಯವಾಗಿ ಭಾರತದ ಕೆಲವು ಎಲೆಕ್ಟ್ರಾನಿಕ್ ಸುದ್ದಿ ಮಾಧ್ಯಮಗಳು ಪಾಕಿಸ್ತಾನದ ಆ ದುಸ್ಥಿತಿಯನ್ನು ಸಂಭ್ರಮಿಸುವ ರೀತಿಯ ಸುದ್ದಿ ಪ್ರಸಾರ ಮಾಡುವುದು ಪತ್ರಿಕಾ ಧರ್ಮಕ್ಕೆ ವಿರುದ್ಧವಾಗಿದೆ. ಒಬ್ಬ ವ್ಯಕ್ತಿ ಅಥವಾ ಒಂದು ದೇಶ ಅವರು ನಮ್ಮ ವಿರೋಧಿಗಳೇ ಆಗಿರಲಿ ಅವ–ರಿಗೆ ಕಷ್ಟ ಬಂದಾಗ ಸಹಾಯ ಮಾಡುವುದು – ಬಿಡುವುದು ಅವರವರ ಇಚ್ಛೆ. ಆದ–ರೆ ಕಷ್ಟದಲ್ಲಿರುವವರನ್ನು ಅವರ ಪರಿಸ್ಥಿತಿ ಕಂಡು ಹಿಯಾಳಿಸುವುದು ತಪ್ಪಾಗುತ್ತದೆ. ಮಾನವೀಯ ಧರ್ಮದ ವಿರೋಧ ವಾಗುತ್ತದೆ..

ಅದಕ್ಕೆ ಬದಲಾಗಿ ಭಾರತ ಪಾಕಿಸ್ತಾನಕ್ಕೆ ಮುಖ್ಯವಾಗಿ ಅದರ ಪುನಃಶ್ಚೇತನಕ್ಕೆ ಸ್ವಲ್ಪ ಸಹಾಯ ಮಾಡಿದರೆ ಖಂಡಿತ ಬಹಳಷ್ಟು ಪಾಕಿಸ್ತಾನಿಯರಲ್ಲಿ ಭಾರತದ ಬಗ್ಗೆ ಇರುವ ದ್ವೇಷ ಕಡಿಮೆಯಾಗಿ ಒಂದಷ್ಟು ಪ್ರೀತಿ ಅಭಿಮಾನ ಬೆಳೆಯಬಹುದು..







ಇಡೀ ಪಾಕಿಸ್ತಾನದ ಜನರೆಲ್ಲಾ ಭಯೋತ್ಪಾದಕರಲ್ಲ. ಎಲ್ಲೋ ಕೆಲವು ಧರ್ಮಾಂಧರು ಮಾತ್ರ ದಾರಿ ತಪ್ಪಿದ್ದಾರೆ ಮತ್ತು ಭಾರತಕ್ಕೆ ಅಪಾಯಕಾ–ರಿಯಾಗಿದ್ದಾರೆ. ಪಾಕಿಸ್ತಾನ ಸಹ ಭಯೋತ್ಪಾದನೆಯಿಂದ ಸಾಕಷ್ಟು ನಲುಗಿದೆ..

ಪಾಕಿಸ್ತಾನದಲ್ಲಿಯೂ ಕುಟುಂಬ, ಪ್ರೀತಿ, ಸಂಬಂಧಗಳು, ಸಂಸ್ಕಾರಗಳು, ಭಾವನೆಗಳು ಎಲ್ಲವೂ ನಮ್ಮಂತೆಯೇ ಇರುತ್ತದೆ. ಎಲ್ಲಾ ನಾಗರಿಕತೆಗಳಲ್ಲೂ ಮನುಷ್ಯ ಭಾವನೆಗಳು ಬಹುತೇಕ ಒಂದೇ ರೀತಿಯಲ್ಲಿ ಇರುತ್ತದೆ. ಸ್ವಲ್ಪ ರೂಪ ಮತ್ತು ಭಾವ ತೀವ್ರತೆಯಲ್ಲಿ ವ್ಯತ್ಯಾಸ ಇರಬಹುದು..

ಕಷ್ಟದ ಸಮಯದ ಸಹಾಯ ಎಂತಹ ಕಲ್ಲು ಹೃದಯವನ್ನು ಕರಗಿಸಬಲ್ಲದು. ಆದ–ರೆ ಮಾಧ್ಯಮಗಳು ಸಾಮಾನ್ಯ ಹೃದಯವನ್ನು ಕಲ್ಲು ಹೃದಯವಾಗಿ ಮಾರ್ಪಡಿಸುವ ದ್ವೇಷ ಅಸೂಯೆ ರೀತಿಯ ವಿಷಯಗಳನ್ನು ಪ್ರಸ್ತಾಪ ಮಾಡಿ ಸಾಮಾನ್ಯ ಜನರ ಉರಿಯುವ ಮನಸ್ಸುಗಳ ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡುತ್ತಿರುವುದು ಅವರು ಬಹುತೇಕ ನಾಗರಿಕ ಸಮಾಜದಿಂದ ದೂರ ಸರಿಯುತ್ತಿರುವ ಲಕ್ಷಣಗಳು ಕಾಣಿಸುತ್ತಿವೆ..

ಯಾವುದೇ ಪರಿಸ್ಥಿತಿಯಲ್ಲಿ ಕ್ರಿಯೆ ಪ್ರತಿಕ್ರಿಯೆಗಳು ನಮ್ಮ ಯೋಗ್ಯತೆಯನ್ನು ಸಹ ಅನಾವರಣ ಮಾಡುತ್ತವೆ. ಅದರ ಅರಿವು ಸದಾ ಜಾಗೃತಾವಸ್ಥೆಯಲ್ಲಿ ಇರಲಿ. ನಮ್ಮ ನೆರೆಹೊರೆಯವರು ಸಂಪೂರ್ಣ ದಿವಾಳಿಯಾದರೆ ಅದರ ದುಷ್ಪ–ರಿಣಾಮ ನಮಗೂ ತಟ್ಟುತ್ತದೆ ಬೇರೆ ರೀತಿಯಲ್ಲಿ..

ಮಾಧ್ಯಮಗಳ ಪ್ರೇ–ರಿತ ಅಭಿಪ್ರಾಯಗಳು ಅತ್ಯಂತ ಅಪಾಯಕಾರಿಯಾಗುತ್ತಿರುವ ಸನ್ನಿವೇಶದಲ್ಲಿ ಬುದ್ದನ ಸಂದೇಶಗಳು ನಮ್ಮ ಎದೆಯೊಳಗೆ ಬೆಳಗುತ್ತಿರಲಿ..



ಬುದ್ದ ಪೂರ್ಣಿಮೆಯ ಮುನ್ನ ಬುದ್ದ ಪ್ರಜ್ಞೆ ಜಾಗೃತವಾಗಲಿ ಎಂದು ಆಶಿಸುತ್ತಾ..

ದ್ವೇಷ ಅಸೂಯೆಯ ಬೆಂಕಿ ತನ್ನನ್ನೂ ಸುಡುತ್ತದೆ ಎಂದು ಎಚ್ಚರಿಸುತ್ತ..

# ’ಲಾಪತಾ ಲೇಡೀಸ್’ ಉತ್ತಮ ಸಂದೇಶ ಸಾರುವ ಚಲನಚಿತ್ರ

**ಉದಯರಶ್ಮಿ ದಿನಪತ್ರಿಕೆ**

ವೀಣಾಂತರಂಗ




–ವೀಣಾ ಎಚ್. ಪಾಟೀಲ್, ಮುಂಡರಗಿ

ಉತ್ತರ ಭಾರತದ ಸೂರಜ್ ಮುಖಿ ಎಂಬ ಗ್ರಾಮದ ಯುವಕ ದೀಪಕ್ ಕುಮಾರ್ ಮದುವೆಯಾಗಿ ತನ್ನ ಪತ್ನಿ ಪೂಲ್ ಕುಮಾರಿ ಯೊಂದಿಗೆ ತನ್ನೂರಿಗೆ ಮರಳಿ ಬರುತ್ತಿದ್ದನು. ರೈಲಿನಲ್ಲಿ ಮತ್ತೂ ಎರಡು ಜೋಡಿ ವಧು ವರರು ಇದ್ದು, ಇಳಿ ಸಂಜೆಯ ಹೊತ್ತಿನಲ್ಲಿ ಎಲ್ಲರೂ ನಿದ್ರಾವಶರಾಗಿದ್ದಾಗ ಮುಸುಗು ಹಾಕಿಕೊಂಡು ಮಲಗಿದ್ದ ವಧುಗಳಲ್ಲಿ ತನ್ನ ಪತ್ನಿ ಎಂದು ಬೇರೊಬ್ಬ ಹೆಣ್ಣುಮಗಳನ್ನು ಎಬ್ಬಿಸಿ ಕರೆದುಕೊಂಡು ಬಂದದ್ದು ಮನೆಗೆ ಬಂದ ನಂತರ ಎಲ್ಲರಿಗೂ ನಡೆದ ತಪ್ಪಿನ ಅರಿವಾಗುತ್ತದೆ. ಈತನ ಜೊತೆಗೆ ಬಂದ ಮಹಿಳೆ ತನ್ನ ಉದ್ದೇಶ ಸಾಧನೆಗಾಗಿ ಬಂದಿದ್ದು ಆಕೆಯ ನಡಾವಳಿ ತುಸು ಸಂಶಯದಿಂದ ಕೂಡಿರುತ್ತದೆ. ಇತ್ತ ಆತನ ಪತ್ನಿ ಫೂಲ್ ಕುಮಾರಿ ಕೊನೆಯ ಸ್ಟೇಷನ್ ನಲ್ಲಿ ಇಳಿದು ಜೊತೆಯಲ್ಲಿ ತನ್ನ ಪತಿ ಇಲ್ಲದೆಯಿದ್ದದ್ದು ನೋಡಿ ಗಾಬರಿಯಾಗುತ್ತಾಳೆ. ಸ್ಟೇಷನ್ ನಲ್ಲಿ ತನಗೆ ಪರಿಚಯವಾದ ಅನಾಥ ವ್ಯಕ್ತಿಯ ಜೊತೆಗೆ ಹೋಗಿ ಸ್ಟೇಷನ್ ಮಾಸ್ಟರ್ ರಲ್ಲಿ ಆಕೆ ದೂರನ್ನು ನೀಡುತ್ತಾಳೆ. ಸ್ಟೇಷನ್ ನಲ್ಲಿ ಚಹಾದ ಅಂಗಡಿ ಇಟ್ಟುಕೊಂಡಿದ್ದ ಮಂಜು ತಾಯಿ, ಓರ್ವ ಅಂಗವಿಕಲ ವ್ಯಕ್ತಿ ಮತ್ತು ಓರ್ವ ಅನಾಥ ವ್ಯಕ್ತಿ ಆಕೆಗೆ ಆಸರೆಯಾಗಿ ದೊರೆತು ಅವರೊಂದಿಗೆ ಕೆಲಸ ಮಾಡುತ್ತಾ ಆಕೆ ತನ್ನ ಪತಿಯ ಬರವಿಗಾಗಿ ನಿರೀಕ್ಷೆ ಮಾಡುತ್ತಾಳೆ.

ಇತ್ತ ದಿಲೀಪ್ ಕುಮಾರ್ ನ ಜೊತೆ ಬಂದ ವ್ಯಕ್ತಿ ತನ್ನ ಹೆಸರು ಜಯ ಎಂದು ಹೇಳಿಕೊಂಡು ಮದುವೆಯಲ್ಲಿ ತನ್ನ ಪತಿಗೆ ತನ್ನ ತವರಿನವರಿಂದ ವರದಕ್ಷಿಣೆಯ ಭಾಗವಾಗಿ ದೊರೆತ ಮೊಬೈಲ್ ಫೋನನ ಸಿಮ್ ಕಾರ್ಡ್ ಅನ್ನು ಸುಟ್ಟುಹಾಕಿ ಮತ್ತೊಂದು ಸಿಮ್ ಹಾಕಿಕೊಳ್ಳುತ್ತಾಳೆ. ದಿಲೀಪ್ ಕುಮಾರ್ ಮತ್ತು ಆರಕ್ಷಕ ಠಾಣೆಯ ಅಧಿಕಾರಿಗಳ ಒತ್ತಾಯದ ಮೇರೆಗೆ ದೂರು ದಾಖಲಿಸುವ ಆಕೆ ಮುಸುಗು ತೆಗೆದ ತನ್ನ ಭಾವಚಿತ್ರವನ್ನು ತೆಗೆಯಲು ಅನುವು ಮಾಡಿಕೊಡುವುದಿಲ್ಲ. ಆಕೆಯ ಮೇಲೆ ನಿಗಾ ಇರಿಸಿ ಬೆಂಬತ್ತಿದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗೆ ಆಕೆ ಚಿನ್ನದ ಅಂಗಡಿಯಲ್ಲಿ ಚಿನ್ನವನ್ನು ಮಾರಿ ಆ ಹಣವನ್ನು ಹೇಮಾ ಎಂಬ ವ್ಯಕ್ತಿಗೆ ಮನಿ ಆರ್ಡರ್ ಮೂಲಕ ನಾಲ್ಕು ಬಾರಿ ಕಳುಹಿಸಿರುವುದು ಗೊತ್ತಾಗುತ್ತದೆ, ಅದರ ಜೊತೆಗೆ ಆಕೆ ಟ್ರಾವೆಲ್ ಏಜೆನ್ಸಿಯಲ್ಲಿ ದೆಹಲಿ ಮೂಲಕ ಡೆಹರಾಡೂನ್ಗೆ ಪ್ರಯಾಣ ಬೆಳೆಸುತ್ತಿರುವುದು ಗೊತ್ತಾಗುತ್ತದೆ. ಇತ್ತ ಮನೆಯವರೊಂದಿಗೆ ಆತ್ಮೀಯ ಸಂಬಂಧವನ್ನು ಬೆಳೆಸಿಕೊಂಡ ಜಯ ಮನೆಯ ಹೆಣ್ಣು ಮಕ್ಕಳಲ್ಲಿ ನಮ್ಮ ಪ್ರತಿಭೆಯನ್ನು ನಾವು ಹತ್ತಿಕ್ಕಬಾರದು, ನಮಗಾಗಿಯೂ ನಾವು ಬದುಕಬೇಕು ಎಂಬ ಅರಿವನ್ನು ಮೂಡಿಸುತ್ತಾಳೆ. ದುಡಿಮೆಗಾಗಿ ದೂರದ ಊರಿನಲ್ಲಿರುವ ಪತಿಯ ನೆನಪಿನಲ್ಲಿ ಕಾಲ ಕಳೆಯುವ ದಿಲೀಪ್ ಕುಮಾರನ ಅತ್ತಿಗೆಯ ಚಿತ್ರರಚನಾ ಶಕ್ತಿಯನ್ನು ಪ್ರೋತ್ಸಾಹಿಸಿ ಆಕೆಗೆ ಬದುಕಿನಲ್ಲಿ ಆಸಕ್ತಿ ಮೂಡಿಸುತ್ತಾಳೆ. ಹೊಲದ ಫಸಲಿಗೆ ಕೀಟಗಳು ಮುಕು–ರಿದಾಗ ಅವುಗಳ ನಿವಾರಣೆಗೆ ಆಕೆ ಪಡುವ ಪ್ರಯತ್ನವನ್ನು ಕಂಡು ಕೃಷಿಯನ್ನು ಕುರಿತ ಆಕೆಯ ಆಸಕ್ತಿ ಮತ್ತು ತಿಳುವಳಿಕೆಗೆ ಎಲ್ಲರೂ ಬೆರಗಾಗುತ್ತಾರೆ. ಈ ಮಧ್ಯದಲ್ಲಿ ದಿಲೀಪ್ ಪತ್ನಿಯನ್ನು ಕಳೆದುಕೊಂಡು ಒದ್ದಾಡುತ್ತಿರುವುದನ್ನು ಗಮನಿಸಿ ಆತನ ಪತ್ನಿಯ ರೇಖಾ ಚಿತ್ರವನ್ನು ದಿಲೀಪನ ಅತ್ತಿಗೆಯಿಂದ ರಚಿಸಿ ಅದರ ಕಂಪ್ಯೂಟರ್ ಪ್ರತಿ ತೆಗೆದು ಫೂಲ್ ಕುಮಾರಿ ಯನ್ನು ಹುಡುಕಲು ಅವಶ್ಯಕ ಕ್ರಮಗಳನ್ನು ದಿಲೀಪ್ ನ ಸ್ನೇಹಿತನ ಸಹಾಯದಿಂದ ಕೈಗೊಳ್ಳುತ್ತಾಳೆ.






ಮುಂದಿನ ಎರಡೇ ದಿನಗಳಲ್ಲಿ ಜಯಾಳನ್ನು ಬಂಧಿಸಿ ಠಾಣೆಗೆ ಕರೆದೊಯ್ಯುವ ಪೊಲೀಸ್ ಅಧಿಕಾರಿ, ದಿಲೀಪ್ ಮತ್ತು ಸ್ನೇಹಿತರಿಗೆ ಜಯ ತನ್ನ ಪ್ರವರವನ್ನು ಬಿಚ್ಚಿಡುತ್ತಾಳೆ ಜಯಾ.

ಈಗಾಗಲೇ ಪಿಯುಸಿ ಓದಿರುವ ಆಕೆ ಕೃಷಿಯಲ್ಲಿ ಆಸಕ್ತಿ ಹೊಂದಿದ್ದು ಡೆಹರಾಡೂನ್ ಗೆ ಹೋಗಿ ಕೃಷಿಯಲ್ಲಿ ಪದವಿಯನ್ನು ಪಡೆಯುವ ತನ್ನ ಆಸಕ್ತಿಯನ್ನು ತಾಯಿಗೆ ಹೇಳಿದಾಗ ಇನ್ನೊಂದು 15 ದಿನಗಳಲ್ಲಿ ಮದುವೆ ಇದ್ದು, ಹೊಲವನ್ನು ಮಾರಿ ಒಡವೆ ವಸ್ತುಗಳನ್ನು ಹೊಂದಿಸಿದ್ದು ಯಾವುದೇ ನಖರೆ ಮಾಡದೇ ಮದುವೆಯಾಗಬೇಕು ಇಲ್ಲದಿದ್ದರೇ ನಮ್ಮ ಹೆಣ ನೋಡಬೇಕಾಗುತ್ತದೆ ಎಂಬ ತಾಯಿಯ ಬೆದರಿಕೆಗೆ ಹೆದರಿ ವಿವಾಹವಾಗಿ ಗಂಡನ ಮನೆಗೆ ತೆರಳುವ ಸಮಯದಲ್ಲಿ ಆಕೆ ರೈಲಿನಲ್ಲಿ ದಿಲೀಪ್ ಕುಮಾರ್ ದಂಪತಿಗಳನ್ನು ಆಕಸ್ಮಿಕವಾಗಿ ನೋಡುತ್ತಾಳೆ. ಈಗಾಗಲೇ ತನ್ನ ಪತಿಗೆ ಮೊದಲ ಮದುವೆಯಾಗಿದ್ದು ಆತನ ಪತ್ನಿ ಆತ್ಮಹತ್ಯೆ ಮಾಡಿಕೊಂಡು ಸತ್ತುಹೋಗಿದ್ದಳು ಎಂಬ ಗುಸು ಗುಸು ಮಾತುಗಳನ್ನು ಮದುವೆಯ ಮನೆಯಲ್ಲಿ ಕೇಳಿದ ಆಕೆ ಉದ್ದೇಶಪೂರ್ವಕವಾಗಿ ದಿಲೀಪ್ ಕುಮಾರನನ್ನು ಹಿಂಬಾಲಿಸಿ ಬರುತ್ತಾಳೆ. ಇಲ್ಲಿಗೆ ಬಂದ ನಂತರ ತನ್ನನ್ನು ಅರ್ಥ ಮಾಡಿಕೊಳ್ಳುವ ತನ್ನ ಹಿರಿಯ ಸಹೋದರಿ ಹೇಮಾಳೊಂದಿಗೆ ಸಂಪರ್ಕದಲ್ಲಿದ್ದು ತನ್ನ ಕೈಬಳೆಯನ್ನು ಮಾರಿ ಆ ಹಣವನ್ನು ಮನಿ ಆರ್ಡರ್ ಮೂಲಕ ತನ್ನ ಸಹೋದರಿಗೆ ತಲುಪಿಸಿ ಡೆಹ್ರಾಡೂನ್ ನ ಕೃಷಿ ಕಾಲೇಜಿನಲ್ಲಿ ಪ್ರವೇಶ ಪಡೆದಿರುತ್ತಾಳೆ.

ಈ ವಿಷಯವನ್ನು ಮೊದಲೇ ಹೇಳಬೇಕಿತ್ತು ಎಂಬ ಪೊಲೀಸ್ ಅಧಿಕಾರಿ ಮತ್ತು ದಿಲೀಪ್ ಕುಮಾರನ ಮಾತಿಗೆ ಆಕೆ ನನ್ನ ತಂದೆ ತಾಯಿಯೇ ನನ್ನನ್ನು ಅರ್ಥ–ಮಾಡಿಕೊಳ್ಳಲಿಲ್ಲ ಅಂತದ್ದರಲ್ಲಿ ಒಂದೆರಡು ದಿನ ಪರಿಚಯವಾದ ನೀವುಗಳು ನನ್ನನ್ನು ಹೇಗೆ ಅರ್ಥ ಮಾಡಿಕೊಳ್ಳುತ್ತೀರಿ? ಮುಸುಗಿನ ಒಳಗೆ ಒದ್ದಾಡುವ ನಮ್ಮ ನೋವು ನಿಮಗೆ ಹೇಗೆ ಅರಿವಾಗುತ್ತದೆ ಎಂದು ಮರು ಪ್ರಶ್ನಿಸಿದಳು. ಅದೇ ಸಮಯಕ್ಕೆ ಫೂಲ್ ಕುಮಾರಿಗೆ ತನ್ನ ಭಾವಚಿತ್ರವಿರುವ ಪ್ರಕಟಣೆಯ ಪತ್ರ ದೊರೆತು ತನ್ನ ಪತಿಯ ಊರಿನ ಪತ್ತೆಯಾಗುತ್ತದೆ. ಆಕೆಯನ್ನು ಸ್ಟೇಷನ್ ಮಾಸ್ಟರ್, ಮಂಜು ತಾಯಿ, ಚೋಟು ಮತ್ತು ಅಂಗವಿಕಲ ವ್ಯಕ್ತಿ ಆಕೆಯ ಪತಿಯ ಊರಿಗೆ ರೈಲು ಹತ್ತಿಸಿ ಪೊಲೀಸ್ ಠಾಣೆಗೆ ಕರೆ ಮಾಡಿ ವಿಷಯವನ್ನು ಮುಟ್ಟಿಸುತ್ತಾರೆ.

ಇತ್ತ ಈಗಾಗಲೇ ಪೊಲೀಸ್ ಹಿರಿಯ ಅಧಿಕಾರಿ ಯಿಂದ ವಿಷಯವನ್ನು ಅರಿತ ಜಯಾಳ ಗಂಡ ಪೊಲೀಸ್ ಠಾಣೆಯಲ್ಲಿ ತನ್ನ ಪತ್ನಿಯ ಕೆನ್ನೆಗೆ ಹೊಡೆದು ದೌರ್ಜನ್ಯ ತೋರುವುದನ್ನು ಕಂಡ ಪೊಲೀಸ್ ಅಧಿಕಾರಿ ಕೂಡಲೇ ಆತನನ್ನು ಗದರಿಸಿ, ಇನ್ನೊಮ್ಮೆ ಆಕೆಯ ತಂಟೆಗೆ ಹೋಗದಿರುವಂತೆಯೂ, ಹಾಗೇನಾದರೂ ಆಕೆಗೆ ತೊಂದರೆ ನೀಡಿದಲ್ಲಿ ಆತನ ಮೊದಲ ಹೆಂಡತಿಯ ಸಾವಿನ ಕೇಸಿನ ಫೈಲ್ ಅನ್ನು ಮತ್ತೆ ಓಪನ್ ಮಾಡುವುದಾಗಿ ಎಚ್ಚರಿಸಿ ಕಳುಹಿಸುತ್ತಾರೆ. ಜಯಕುಮಾರಿಗೆ ಆಕೆಯ ತಾಯಿಯಿಂದ ಉಡುಗೊರೆಯಾಗಿ ಬಂದ ಒಡವೆಗಳೆಲ್ಲವನ್ನು ನೀಡಿ ಚೆನ್ನಾಗಿ ಓದಿ ಒಳ್ಳೆಯ ಬದುಕು ನಡೆಸುವಂತೆ ಆಶೀರ್ವದಿಸಿ ಕಳುಹಿಸುತ್ತಾರೆ. ರೈಲ್ವೆ ಸ್ಟೇಷನ್ ಗೆ ಬಂದ ದಿಲೀಪ್ ಕುಮಾರನನ್ನು ಪತ್ನಿ ಫೂಲ್ ಕುಮಾರಿ ಹೆಸರು ಹಿಡಿದು ಕರೆಯುವುದರ ಮೂಲಕ ಮಂಜು ತಾಯಿ ಹೇಳಿದ ಮೊದಲ ಸ್ವಾವಲಂಬಿತನವನ್ನು ಕಲಿಯುತ್ತಾಳೆ. ಮುಂದಿನ ಒಂದೆರಡು ದಿನಗಳಲ್ಲಿ ಎಲ್ಲರೂ ಸೇರಿ ಜಯಳನ್ನು ಆಕೆಯ ಗಮ್ಯಸ್ಥಾನಕ್ಕೆ ಕಳುಹಿಸುತ್ತಾರೆ.

ಮೊದಲರ್ಧ ಭಾಗ ತುಸು ಎಳೆದಂತೆ ತೋರುವ ನಂತರದ ಭಾಗದಲ್ಲಿ ಅತ್ಯಂತ ಚುರುಕಾಗಿ ಓಡುವ ಕಥೆ ಹೃದಯಸ್ಪರ್ಶಿಯಾಗಿದೆ. 21ನೇ ಶತಮಾನದಲ್ಲಿ ಇದ್ದರೂ ಹೆಣ್ಣು ಮಕ್ಕಳು ಕೇವಲ ಅಡುಗೆ ಮನೆಗೆ ಮಾತ್ರ ಮೀಸಲು ಎಂಬ ಪುರುಷಾಹಂಕಾರ ಪ್ರಜ್ಞೆಗೆ ಮಣಿಯುವ ಸಮಾಜದ ಮೌಢ್ಯಗಳನ್ನು, ತಥಾ ಕಥಿತ ಸಂಪ್ರದಾಯಗಳನ್ನು ಪ್ರಶ್ನಿಸುವಲ್ಲಿ ಈ ಚಿತ್ರ ಯಶಸ್ವಿಯಾಗಿದೆ. ಅತ್ಯಂತ ಹೃದಯಸ್ಪರ್ಶಿಯಾಗಿ ಮೂಡಿಬಂದಿರುವ ಅಂತಿಮ ದೃಶ್ಯಗಳು ನೋಡುಗರ ಕಣ್ಣಲ್ಲಿ ನೀರು ತರಿಸುವುದಂತು ನಿಜ. ಭಾವನಾತ್ಮಕವಾಗಿ ಹೆಣ್ಣು ಅನುಭವಿಸುವ ನೋವು ಸಂಕಟ ಅತಂತ್ರ ಸ್ಥಿತಿಗಳನ್ನು ಹೃದಯ ಸ್ಪರ್ಶಿಯಾಗಿ ಬಿಚ್ಚಿಟ್ಟಿರುವ ಕಥೆ ಎರಡು ದಶಕಗಳ ಹಿಂದೆ ನಡೆದಿದೆ ಎನ್ನಲಾಗುತ್ತದೆ.



ಕಿರಣ್ ರಾವ್ ನಿರ್ದೇಶನದ ಈ ಚಿತ್ರ ಪ್ರಸ್ತುತ ಸಮಾಜದಲ್ಲಿ ಹಾಸು ಹೊಕ್ಕಾಗಿರುವ ಮೂಢ ನಂಬಿಕೆಗಳ ವಿರುದ್ಧ, ಸಂಪ್ರದಾಯಗಳ ವಿರುದ್ಧ ಧ್ವನಿ ಎತ್ತುವುದರ ಜೊತೆ ಜೊತೆಗೆ ಸಮಾಜದಲ್ಲಿ ನೆಲೆಯಾಗಿರುವ ಪ್ರೀತಿ ಅಂತಃಕರಣ ಮತ್ತು ಮಾನವೀಯ ಸೆಲೆ ಗಳನ್ನು ಕೂಡ ಹೊರಹೊಮ್ಮಿಸುತ್ತದೆ.

ಅತ್ಯಂತ ಹಿಂದುಳಿದ ರಾಜ್ಯಗಳಲ್ಲಿ ಇಂದಿಗೂ ಕೂಡ ಹೆಣ್ಣು ಮಕ್ಕಳನ್ನು ಹೀನಾಯವಾಗಿ ನಡೆಸಿಕೊಳ್ಳುವ ಪ್ರವೃತ್ತಿಗೆ ಹಿಡಿದ ಕನ್ನಡಿ ಯಾಗಿದೆ. ಈ ಚಲನಚಿತ್ರ ಲಾಪತಾ ಲೇಡೀಸ್

# ಆಕ್ರಮ ಮರುಳು: ಎಸಿ ಯವರಿಂದ ರೇಡ್

ಉದಯರಶ್ಮಿ ನ್ಯೂಸ್



ಇಂಡಿ: ಸಿಂದಗಿ ಮತ್ತು ಆಲಮೇಲ ತಾಲೂಕುಗಳಲ್ಲಿ ಭೀಮಾ ನದಿಯಲ್ಲಿ ಆಕ್ರಮ ಮರುಳು ಸಾಗಾಣಿಕೆ ಮಾಡುವ ಕುರಿತು ಸೋಮವಾರ ರಾತ್ರಿ 11 ಗಂಟೆಯಿಂದ ರೇಡ್ ಇಂಡಿಯ ಕಂದಾಯ ಉಪವಿಭಾಗಾಧಿಕಾರಿ ಅಬೀದ್ ಗದ್ಯಾಳ ಇವರ ನೇತೃತ್ವದಲ್ಲಿ ನಡೆಯಿತು.

ಇಂಡಿ, ಸಿಂದಗಿ ಮತ್ತು ಆಲಮೇಲ ತಾಲೂಕುಗಳಲ್ಲಿ ಎಲ್ಲ ಕಡೆಗೂ ಆಕ್ರಮ ಮರುಳು ಮಾಡುವಾಗಲೇ ಹಿಡಿದಿದ್ದಾರೆ.

ಎಲ್ಲ ಕಡೆಗೂ ಆಕ್ರಮ ಮರುಳು ಮಾಡುವವರು ತಮ್ಮ ವಾಹನ ಗಳಿಗೆ ಕೀಲಿ ಹಾಕಿ ಓಡಿ ಹೋಗಿದ್ದಾರೆ.


ಒಂದು ಹಿಟಾಚಿ, ಒಂದು ಜೆಸಿಪಿ, ಎರಡು ಟ್ರ್ಯಾಕ್ಟರ್ ಒಂದು ಬುಲೆರೋ ಸೇರಿದಂತೆ ಹಲವಾರು ವಾಹನ ವಶದಲ್ಲಿ ಪಡೆದಿದ್ದಾರೆ.

ಅದಲ್ಲದೆ ಯಾರೂ ನದಿಯಲ್ಲಿಯ ಮರುಳು ಆಕ್ರಮ ಮಾಡಬಾರದು. ಮರುಳು ತೆಗೆಯಲು ವಾಹನಗಳನ್ನು ಬಳಸಬಾರದು, ನದಿ ದಂಡೆಯ ಸಮೀಪದ ತೋಟದವರು ಮರುಳು ಆಕ್ರಮಕ್ಕೆ ವಾಹನ ಹೋಗಲು ಜಾಗ ನೀಡಬಾರದು. ಇಲ್ಲದಿದ್ದರೆ ಕ್ರಮ ಜರುಗಿಸಲಾಗುವದು ಎಂದರು.

ಆಲಮೇಲ ತಹಸೀಲ್ದಾರ ಮಹಾದೇವ ಸಣ್ಣಮೂರಿ, ಲಕ್ಷ□□ಣ ಕಾಢೆ, ರವಿ ಕಕ್ಕಳಮೇಲಿ, ಮಾರುತಿ ಸಾಳುಂಕೆ, ಯಮನೂರ ಗೊಂಧಳಿ, ಭೀಮಣ್ಣ ಜೇರಟಗಿ, ಶರಣು ತಳವಾರ, ದತ್ತು ವಾಲಿಕಾರ, ಮಲಕಪ್ಪ ಮತ್ತಿತರಿದ್ದರು.

# ಇಂಡಿ: ಬ್ಯಾಂಕ್ ಖಾತೆಯಿಂದ 2.1 ಲಕ್ಷ ಗುಳುಂ

ಉದಯರಶ್ಮಿ ನ್ಯೂಸ್



ಇಂಡಿ: ಪಟ್ಟಣದ ಕೆನರಾ ಬ್ಯಾಂಕ್ ಖಾತೆಯಲ್ಲಿರುವ ಶಿವಾನಂದ ಲಕ್ಕುಂಡಿಮಠ ಇವರ ಖಾತೆ 125004939219 ಅಕೌಂಟನಿಂದ ಎರಡು ಲಕ್ಷ ಹತ್ತು ಸಾವಿರ ರೂ ವಂಚನೆ ಯಾಗಿರುತ್ತದೆ.

ಬ್ಯಾಂಕ್ ಖಾತೆಯಿಂದ ಹಣ ವರ್ಗಾವಣೆ ಯಾಗಿದ್ದು ಯಾರು ಈ ಕೃತ್ಯ ಮಾಡಿದ್ದಾರೆ ಎಂಬುದು ಇನ್ನೂ ತಿಳಿಸಿದಿಲ್ಲ.

ಖಾತೆಯಲ್ಲಿಯ ಹಣ ಒಂದೇ ಬಾರಿಗೆ ತೆಗೆಯದೇ ರವಿವಾರ ಮಧ್ಯಾಹ್ನ ಸುಮಾರಿಗೆ ಮೊದಲಬಾ–ರಿಗೆ ಒಂದು ಲಕ್ಷ ರೂ, 2 ನೇ ಸಲ 35 ಸಾವಿರ ರೂ, 3 ನೇ ಸಲ 50 ಸಾವಿರ ರೂ, 4 ನೇ ಬಾರಿ 25 ಸಾವಿರ ರೂ ಹಣ ಹೋಗಿದೆ.

ಬ್ಯಾಂಕ್ ಮೊಬಾಯಿಲ್ ಆಪ್ ಇಲ್ಲ, ಎಟಿಎಂ ಇಲ್ಲ,ಚೆಕ್ ಇಲ್ಲ ಹಿಗಿದ್ದರೂ ಸಹಿತ ಖಾತೆಯಲ್ಲಿಯ ಹಣ ಖಾಲಿಯಾಗಿದೆ.

ಈ ಕುರಿತು ಭಾನುವಾರ ಸಾಯಂಕಾಲವೇ ವಿಜಯಪುರ ಸೈಬರ್ ಕ್ರೈಂ ಪೋಲಿಸ್ ಠಾಣೆಯಲ್ಲಿ ದೂರು ದಾಖಲು ಮಾಡಲಾಗಿದೆ.

ಇಂದು ಪಟ್ಟಣದ ಅನೇಕ ಜನರು ಕೆನರಾ ಬ್ಯಾಂಕಿಗೆ ಭೇಟಿ ನೀಡಿ ಬ್ಯಾಂಕಿನ ಹಿರಿಯ ವ್ಯವಸ್ಥಾಪಕರ ಜೊತೆಗೆ ಚರ್ಚಿಸಿದರು.

ಹಿರಿಯ ವ್ಯವಸ್ಥಾಪಕ ಸಿದ್ದನಗೌಡ ಮಾತನಾಡಿ ಬ್ಯಾಂಕ ಖಾತೆಯಿಂದ ಹಣ ಖಾಲಿಯಾದರೆ ಒಂದು ಗಂಟೆಯ ಒಳಗಡೆ 1930 ನಂ ಫೋನು ಮಾಡಬೇಕು. ಯಾವದೇ ಬ್ಯಾಂಕಿನ ಖಾತೆಯಲ್ಲಿ ಹಣ ಇರಲಿ ಒಂದು ಗಂಟೆಯ ಒಳಗೆ ಫೋನು ಮಾಡಿ. ಆಗ ಅಕೌಂಟ್ ಬ್ಲಾಕ್ ಮಾಡುತ್ತಾರೆ. ಮುಂದೆ ಹಣ ಹೋಗುವದಿಲ್ಲ.

ಅದಲ್ಲದೆ ಎಪಿಕೆ ಲಿಂಕ್, ಎಸ್ ಎಂ ಎಸ್, ವ್ಯಾಟ್ಸ ಅಫ್ ಓಪನ್ ಮಾಡಬೇಡಿ ಎಂದರು ಸಾರ್ವಜನಿಕರಿಗೆ ಸೂಚನೆ ನೀಡಿದರು. ಅದಲ್ಲದೆ ಯಾವುದೇ ಬ್ಯಾಂಕಿನವರು ಓಟಿಪಿ ಕೇಳುವದಿಲ್ಲ, ಮತ್ತು ಪಿನ್ ನಂ ಕೇಳುವದಿಲ್ಲ ಎಂದರು.

ಅದಲ್ಲದೆ ಲಕ್ಕುಂಡಿಮಠ ಇವರ ಹಣ ಕುರಿತು ಎಲ್ಲ ಕಡೆಗೆ ಪ್ರಯತ್ನಿಸುತ್ತಿದ್ದು ಹಣ ಜಮೆ ಆಗುತ್ತದೆ ಎಂದರು.

ಪುರಸಭೆ ಸದಸ್ಯ ಅನೀಲಗೌಡ ಬಿರಾದಾರ, ಕರವೇ ಅಧ್ಯಕ್ಷ ಬಾಳು ಮುಳಜಿ, ನ್ಯಾಯವಾದಿ ಎಸ್.ಎಲ್.ನಿಂಬರಗಿಮಠ, ಗೀರಿಶ ಪಾಟೀಲ,ಅರವಿಂದ ಪಾಟೀಲ,ಸಂತೋಷ ಪಾಟೀಲ ರೋಡಗಿ, ಆದಿತ್ಯ ಶಿಂಧೆ ಮತ್ತಿತ–ರಿದ್ದರು.

ಪ್ರಕರಣ ಇಂಡಿ ಪೋಲಿಸ ಠಾಣೆಯಲ್ಲಿ ದಾಖಲಾಗಿದೆ.

# ಲೋಕಾಯುಕ್ತ ಅಧಿಕಾರಿಗಳ ತಾಲೂಕು ಮಟ್ಟದ ಸಭೆ

ಉದಯರಶ್ಮಿ ನ್ಯೂಸ್



ಮುದ್ದೇಬಿಹಾಳ: ಇಲ್ಲಿನ ತಹಶೀಲ್ದಾರ ಕಚೇರಿಯ ಸಭಾಭವನದಲ್ಲಿ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ತಾಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಸಿದರು.

ತಾಲೂಕು ಪಂಚಾಯತ ವ್ಯಾಪ್ತಿಯಲ್ಲಿ ಸಾಕಷ್ಟು ದೂರುಗಳು ಕೇಳಿ ಬರುತ್ತಿವೆ. ಖಾತೆಗಳ ಬದಲಾವಣೆ ಸೇರಿದಂತೆ ಗ್ರಾಮ ಪಂಚಾಯತಗಳಲ್ಲಿ ಪಿಡಿಓ ಗಳು ಸರಿಯಾಗಿ ಕಾರ್ಯನಿರ್ವಹಿಸದ ಬಗ್ಗೆ ಸಾಕಷ್ಟು ದೂರುಗಳು ಬರುತ್ತಿದ್ದು ಸರಿಪಡಿಸುವಂತೆ ಕಾರ್ಯ ನಿರ್ವಾಹಕ ಅಧಿಕಾ–ರಿಗಳಿಗೆ ಸೂಚಿಸಿದರು.

ಜಿಪಿಎಸ್ ಮಾಡಿಕೊಡುವದಾಗಿ ಸುಳ್ಳು ಹೇಳಿ ಸಾರ್ವಜನಿಕರಿಕ–ರಿಂದ ಭೂ ಮಾಪಕರು ಹಣ ಪಡೆಯುತ್ತಿರುವ ಬಗ್ಗೆ ದೂರುಗಳು ಬಂದಿದ್ದು ಹೀಗಾಗದಂತೆ ಕ್ರಮವಹಿಸುವಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಸೂಚಿಸಿದರು. ಕಾಲ ಕಾಲಕ್ಕೆ ಮೊಟ್ಟೆ ಸೇರಿದಂತೆ ಗರ್ಭಿಣಿಯರಿಗೆ ನೀಡುತ್ತಿರುವ ಪೋಶಕಾಂಶಯುಕ್ತ ಪದಾರ್ಥಗಳ ವಿತರಣೆಗಳ ಮಾಹಿತಿ ಕಲೆ ಹಾಕಿದ ಲೋಕಾಯುಕ್ತ ಅಧಿಕಾ–ರಿಗಳು ಭ್ರೂಣ ಹತ್ಯೆ ಪ್ರಕರಣಗಳ ಬಗ್ಗೆ ಸೂಕ್ತ ಗಮನ ಹರಿಸುವಂತೆ, ಸ್ಕಾ□□ನಿಂಗ್ ಸೆಂಟರ್‌ಗಳ ಮೇಲೆ ನಿಗಾ ವಹಿಸುವಂತೆ ಸೂಚಿಸಿದರು. ಪುರಸಭೆ ವ್ಯಾಪ್ತಿಯಲ್ಲಿ ಬರುವ ಪಟ್ಟಣ ಸ್ವಚ್ಛವಿಲ್ಲದ ಬಗ್ಗೆ ಪುರಸಭೆ ಮುಖ್ಯಾಧಿಕಾರಿಗೆ, ಕೃಷಿ ಹೊಂಡ ಟಾರ್ಗೇಟ್ ರೀಚ್ ಮಾಡದ ಬಗ್ಗೆ ಕೃಷಿ ಅಧಿಕಾರಿಯನ್ನ ತರಾಟೆಗೆ ತೆಗೆದುಕೊಂಡರು. ಮುಂಗಾರು ಮಳೆ ಪ್ರಾರಂಭವಾಗಿದ್ದು ರೈತರಿಗೆ ನೀಡಬೇಕಾದ ಬೀಜ ಗೊಬ್ಬರಗಳ ವಿತರಣೆಯಲ್ಲಿ ನಿಯಮಗಳ ಪಾಲನೆಯಾಗುವಂತೆ ಸೂಚಿಸಿದರು. ಹೆಸ್ಕಾಂ ನವರು ಯಾವುದೇ ಯಾವುದೇ ರೈತರ ಬೇಡಿಕೆಗೆ ತಕ್ಕಂತೆ ಹಣ ಪಡೆಯದೇ 72 ತಾಸುಗಳ ಒಳಗಾಗಿ ಟಿಸಿ ಅಳವಡಿಸುವಂತೆ, ಒಂದು ವೇಳೆ ಯಾವುದೇ ರೈತರ ಬಳಿ ಹಣಕ್ಕೆ ಬೇಡಿಕೆ ಇಟ್ಟಲ್ಲಿ ಕಚೇರಿಗೆ ದೂರು ನೀಡುವಂತೆ ತಿಳಿಸಿದರು. ಎಲ್ಲ ಕಚೇರಿಗಳಲ್ಲಿ ಅಧಿಕಾರಿಗಳ ಮತ್ತು ನೌಕರರ ದಿನಚರಿ ಪುಸ್ತಕ, ನಗದು ವಹಿ, ಸಂದರ್ಶಕರ ವಹಿ ಪುಸ್ತಗಳ ನಿಯಮಗಳನ್ನು ಕಟ್ಟು ನಿಟ್ಟಾಗಿ ಪಾಲಿಸುವಂತೆ ಸೂಚಿಸಿದರು.

ಇದೇ ವೇಳೆ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿದರು. ಕಾಳಗಿ ಗ್ರಾಮದ ರಿ.ಸ ನಂ 148*/2 ಭೂಮಿಯ ಮೃತರ ವಾರಸಾ, ಕಾಳಗಿ ಗ್ರಾಮದ ರಿ.ಸ.ನಂ 127/1+2ಎ ಜಮೀನಿನ ನ್ಯಾಯಾಲಯದಲ್ಲಿನ ಆದೇಶದಂತೆ ಪೋಡಿ ಮಾಡದಿರುವ, ಪಟ್ಟಣದ ಮಾರುತಿ ನಗರದಲ್ಲಿ ಸಾರ್ವಜನಿಕ ಜಾಗೆಯಲ್ಲಿ ದೇವಸ್ಥಾನ ನಿರ್ಮಿಸಿದ ಬಗೆಗಿನ ದೂರುಗಳು ಪ್ರಮುಖವಾಗಿದ್ದವು.


ಲೋಕಾಯುಕ್ತ ಅಧಿಕಾ–ರಿಗಳಾದ ಟಿ.ಮಲ್ಲೇಶ, ಸುರೇಶ ರೆಡ್ಡಿ, ಆನಂದ ಟಕ್ಕಣ್ಣವರ, ಆನಂದ ಡೋಣಿ, ಸಿಬ್ಬಂದಿಗಳಾದ ಶಂಕರ ಕಟೆ, ಸಂತೋಷ ಅಮರಖೇಡ್, ಆನಂದ ಪಡಶೆಟ್ಟಿ, ತಹಶೀಲ್ದಾರ ಬಸವರಾಜ ನಾಗರಾಳ, ತಾಲೂಕು ಪಂಚಾಯತ ಇಓ ಎಸ್.ಎಸ್. ಕಲ್ಮನಿ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಭಾಗಿಯಾಗಿದ್ದರು.

ಉದಯರಶ್ಮಿ ದಿನಪತ್ರಿಕೆ

## ಕಾವ್ಯರಶ್ಮಿ

– ತೇರು ವಾಗೀಶ್

("ನಮ್ಮ ಕಥಾ ಅರಮನೆ" ಬರಹಗಾರರು)




### ಅರಿವಿನ ಬೆಳಕು

ಹೃದಯದಲ್ಲಿ ಪ್ರೀತಿಯ ಚಿಲುಮೆಯನಿಟ್ಟು
ಲಯ ಭಯದ ಭಾವವಿಲ್ಲದೆ
ಸ್ಥಿತ ಪ್ರಜ್ಞತೆ ಭಾವದಲ್ಲಿ
ಮಂದಸ್ಮಿತ ಸಿದ್ಧಿ ಪುರುಷನ
ಕಂಡ ಅಂಗುಲಿಯ
ಮನ ಕರಗಿ ನೀರಾಯಿತು...

ಹುಟ್ಟಿನೊಂದಿಗೆ ಸಾವಿನ
ಬೀಜವ ಬಿತ್ತಿದ ಸೃಷ್ಟಿಯ
ರಹಸ್ಯವ ಬಿಚ್ಚಿಟ್ಟು...
ಸಾವು–ಸಾಸಿವೆಯು ಬರಿ
ನೆಪ ಮಾತ್ರವೆಂದು
ತಿಳಿ ಹೇಳಿ ಸಂತೈಸಿದ್ದು
ಗೌತಮಿಗೆ ಅರಿವಿನ ಬೆಳಕಾಯಿತು....–



# ಸೆಳೆತ



## ಭಾವರಶ್ಮಿ

–ವಿಜಯಲಕ್ಷ್ಮಿ ಮೂರ್ತಿ

("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ

ಹುಟ್ಟೂರು ಬಿಟ್ಟು ಬಂದು ಕೆಲವು ದಶಕಗಳಾಗಿದೆ. ಆದರೆ ಯಾಕೋ ಇಂದು ಊರಿನ ಸೆಳೆತ. ನಮ್ಮ ಬಡತನ ನೋಡಲಾರದೆ ನನ್ನ ಸೋದರ ಮಾವ ಚೂಟಿಯಾಗಿದ್ದ ನನ್ನನ್ನು ಅವರ ಮನೆಗೆ ಕರೆ ತಂದರು. ತುಂಬಿದ ಈ ಮನೆಯಲ್ಲಿ ನನಗೆ ಪ್ರೀತಿ, ಭದ್ರತೆಗೆ ಕೊರತೆ ಇರಲಿಲ್ಲ.ಆದರೆ ಒಂದು ದಿನ ಯಾವ ಕಾಯಿಲೆ ಇಲ್ಲದೆ ಗಟ್ಟಿ ಮುಟ್ಟಾಗಿದ್ದ ಮಾವ ಹೃದಯಾಘಾತದಿಂದ ಕಣ್ಣು ಮುಚ್ಚಿದರು.ಅತ್ತೆ ತನ್ನ ಮಕ್ಕಳ ಜೊತೆ ತವರು ಸೇರಿದಳು. ನನ್ನ ಪಿ. ಯು. ಸಿ ಪರೀಕ್ಷೆ ಇನ್ನೂ ಆಗಿರಲಿಲ್ಲ, ಹಾಗಾಗಿ ಅತ್ತೆ ನನ್ನನ್ನು ತವರಿಗೆ ಹೋಗುವ ಮುಂಚೆ ಪರಿಚಯದ ಮನೆಯಲ್ಲಿ ಪೂಜೆ ಮಾಡಲು ಬಿಟ್ಟಳು. ಮಾವ ಹೋದಾಗ ಅಪ್ಪ ಬಂದು ನನ್ನನ್ನು ಕರೆದರು ನಾನು ಪೇಟೆಯ ಜೀವನಕ್ಕೆ ಒಗ್ಗಿ ಹೋಗಿದ್ದೆ ಪರೀಕ್ಷೆ ಆದ ಮೇಲೆ ಬರುವೆ ಅಂದೆ, ಅಪ್ಪ! ಹಾಗೇ ಆಗಲಿ ಮಗನೆ ಎಂದು ಊರಿಗೆ ಹೋಗಿದ್ದರು. ನಾನು ಇಲ್ಲೆ ಇದ್ದು ಸಣ್ಣ ಪುಟ್ಟ ಕೆಲಸ ಮಾಡುತ್ತಾ ಪದವಿ ಪರೀಕ್ಷೆಗೆ ತಯಾರು ಮಾಡುತ್ತಿದ್ದೆ.

ನನ್ನ ಕಾಲೇಜ್ ನಡೆಸುತ್ತಿದ್ದ ಆಶ್ರಮದ ಸ್ವಾಮೀಜಿ ನನ್ನ ಬುದ್ಧಿವಂತಿಕೆ ನೋಡಿ ನೀನು ಆಶ್ರಮಕ್ಕೆ ಬಂದು ಇಲ್ಲೆ ಸಣ್ಣ ಪುಟ್ಟ ಕೆಲಸ ಮಾಡುತ್ತಾ ಓದಿದರೆ ಒಳ್ಳೆಯದು ನಮಗೂ ನಿನ್ನಂತ ಹುಡುಗರ ಅವಶ್ಯಕತೆ ಇದೆ ಎಂದು ಆಫೀಸ್ ಗೆ ಕರೆಸಿ ಹೇಳಿದರು, ನನಗೂ ಸರಿ ಎನಿಸಿತು.

ಹೀಗೆ ಆಶ್ರಮಕ್ಕೆ ಸೇರಿದ ನಾನು ಸ್ವಾಮೀಜಿಯ ಮೆಚ್ಚಿನ ಶಿಷ್ಯನಾದೆ. ಸ್ವಾಮೀಜಿ ಅವರ ಬಂಟನಾದೆ. ನಾನು ಒಳ್ಳೆಯ ಅಂಕಗಳೊಂದಿಗೆ ಪದವೀಧರನಾದೆ. ಕೆಲಸಕ್ಕೆ ಹೋಗುವ ಆಸೆ ನನ್ನಲ್ಲಿರಲಿಲ್ಲ. ಆಶ್ರಮದ ಪ್ರತಿಯೊಂದು ಕಾರ್ಯದಲ್ಲೂ ನನ್ನ ಕೈ ಇರಬೇಕಾಗಿತ್ತು. ನನ್ನ ಕಾರ್ಯ ದಕ್ಷತೆಯಿಂದ ಗುರುಗಳು ತುಂಬಾ ಆನಂದ ಹೊಂದಿದ್ದರು.


ಸ್ವಾಮೀಜಿಗೆ ಈಗೀಗ ತುಂಬಾ ಸುಸ್ತು ಆಗಲಿಕ್ಕೆ ಶುರುವಾಗಿತ್ತು. ತಮ್ಮ ಜಾಗಕ್ಕೆ ಮತ್ತೊಬ್ಬರನ್ನು ನೇಮಿಸಬೇಕೆಂದು ನನ್ನ ಜೊತೆ ಆಪ್ತ ಸಮಾಲೋಚನೆ ಮಾಡಿ ತಮ್ಮ ಶಿಷ್ಯರಲ್ಲಿ ನೇಮ, ನಿಷ್ಠೆಯಿಂದ ಇದ್ದ ಒಬ್ಬರನ್ನು ಆರಿಸಿದರು. ಆಶ್ರಮದ ಜನರು ಹೊಸ ಸ್ವಾಮೀಜಿಯವರ ಆದರ್ಶ ಹಾಗೂ ದಿಟ್ಟ ನಡೆಯನ್ನು ಇಷ್ಟಪಟ್ಟಿದ್ದರು.

ನನ್ನ ಯೌವನ ದಿನವನ್ನು ದೊಡ್ಡ ಸ್ವಾಮೀಜಿಯ ಹಿಂದೆ ಮುಂದೆ ಇರುತ್ತಾ ಕಳೆದಿದ್ದೆ. ತುಂಬಾ ದಿನದಿಂದ ಊರಿನ ಕಡೆ ನನ್ನ ಮನಸ್ಸು ವಾಲುತ್ತಿದೆ ಹಳೆ ಸ್ನೇಹಿತರನ್ನು ಭೇಟಿಯಾಗಿ ಬರಬೇಕು ಅನ್ನಿಸುತ್ತಿದೆ ಆದರೆ ವೃದ್ಧರಾದ ಸ್ವಾಮೀಜಿಯವರನ್ನು ಬಿಟ್ಟು ಹೋಗಲಾರದೆ ಮನಸ್ಸು ಬೇಡ ಎನ್ನುತ್ತಿದೆ.

ಸ್ವಾಮೀಜಿ ಹೇಳಿದ್ದರು ನನ್ನ ಮನಸ್ಸಿನ ತೊಲಲಾಟ ನೋಡಿ ಕರೆಯುವ ಹೃದಯಕ್ಕಿಂತ ನೆನಸುವ ಹೃದಯ ಶ್ರೇಷ್ಠ ಕರೆಯುವ ಹೃದಯದಲ್ಲಿ ಅವಶ್ಯಕತೆ ಇರುತ್ತೆ, ನೆನಸುವ ಹೃದಯದಲ್ಲಿ ಅಭಿಮಾನ, ಪ್ರೀತಿ ಇರುತ್ತೆ. ನೀನು ನಿಮ್ಮವರನ್ನು ನೆನಸುತ್ತಾ ಇಲ್ಲಿ ಒಳ್ಳೆಯ ಕೆಲಸ ಮಾಡಿದ್ದಿ, ನಿನಗೂ ಸ್ವಲ್ಪ ವಿಶ್ರಾಂತಿ ಬೇಕು ಎನಿಸಿದರೆ ಹುಟ್ಟೂರಿಗೆ ಹೋಗಿ ಬಾ. ಇಲ್ಲಿ ಹೇಗೂ ನನಗೆ ಹೆಗಲಾಗಿ ಚಿಕ್ಕ ಸ್ವಾಮೀಜಿ ಇದ್ದಾರೆ.

ಸ್ವಾಮೀಜಿ ಹೇಳಿದ ಮಾತು ನನಗೆ ಸರಿ ಅನ್ನಿಸಿ ಊರ ಕಡೆ ಹೊರಟೆ. ದೊಡ್ಡ ಗಂಟಿನ ಹಣ ಕೊಟ್ಟರು ಸ್ವಾಮೀಜಿ. ನಿಮ್ಮ ಮನೆಯವರಿಗೆ ಅವಶ್ಯಕತೆ ಇದ್ದಲ್ಲಿ ಕೊಟ್ಟು ಬಾ. ಅಥವ ನಿನ್ನ ಇರುವಿಕೆ ಅವ–ರಿಗೆ ಇಷ್ಟವಾದರೆ ಅಲ್ಲೇ ಇದ್ದು ಯಾವಾಗಲಾದರೂ ಒಮ್ಮೆ ನಮ್ಮನ್ನು ನೋಡಲು ಬಂದರೆ ಒಳ್ಳೆಯದು. ಅವರ ಮಾತು ಕೇಳಿ ದುಃಖದಿಂದ ಅವರ ಕಾಲನ್ನು ಹಿಡಿದು ಅತ್ತು ಬಿಟ್ಟೆ. ಆಶ್ರಮದ ಜನರಿಗೆ ಮತ್ತೆ ಬರುವೆ ಎಂದು ಬೀಳ್ಕೊಡುತ್ತಾ ಅಲ್ಲಿಂದ ಹೊರಟೆ.

ಸ್ವಾಮೀಜಿ ತಮ್ಮ ಕಾರು ಚಾಲಕನಿಗೆ ನನ್ನನ್ನು ಊರಿಗೆ ಬಿಟ್ಟು ಬರಲು ಹೇಳಿದರು. ಆಶ್ರಮದ ಜನರಿಗೆ ವಿದಾಯ ಹೇಳುತ್ತಾ ಕಾರು ಹತ್ತಿದೆ, ನಮ್ಮ ಊರು ಬರುತ್ತಿದ್ದ ಹಾಗೇ ಮನಸ್ಸಿಗೆ ಸಂತಸ ನನ್ನ ಊರು ನನ್ನ ಮನೆ ಹೇಗಿರಬಹುದು? ಯಾರಿಗೂ ನಾನು ಬರುವ ವಿಷಯ ಗೊತ್ತಿಲ್ಲ. ಅಪ್ಪ, ಅಮ್ಮ ಮರಣ ಹೊಂದಿದಾಗ ನಾನು ಬರಲಿಲ್ಲ ಎಲ್ಲದಕ್ಕೂ ಮಿಗಿಲಾದದ್ದು ಅಪ್ಪ ಅಮ್ಮನ ಆಶೀರ್ವಾದ ಪ್ರೀತಿ



ಎಂದೂ ಗೊತ್ತಾಗಲೇ ಇಲ್ಲ ನನ್ನ ಒಡಹುಟ್ಟಿದವರಿಗೆ ನನ್ನ ನೋಡಿ ಏನು ಅನಿಸಬಹುದು? ನೂರಾರು ಯೋಚನೆಗಳು.

ಭರವಸೆ ಯಾವಾಗಲೂ ಮುಂದೆ ನೋಡುವಂತೆ ಮಾಡುತ್ತೆ ಸ್ವಾಮೀಜಿ ಹೇಳಿದ್ದು ನೆನಪಾಗಿ ಮನಸ್ಸು ಹೂವಿನಂತೆ ಹಗುರವಾಯಿತು. ಎಲ್ಲರನ್ನು ಭೇಟಿಯಾಗುವ ಕನಸಿನಲ್ಲಿ ಕಾರು ಮನೆ ಮುಂದೆ ಬಂದಿದ್ದು ಗೊತ್ತಾಗಲೇ ಇಲ್ಲ. ಸ್ವಾಮೀಜಿ! ಕಾರು ಚಾಲಕ ಕರೆದಿದ್ದು ಕೇಳಿಸಿ ತಲೆ ಎತ್ತಿ ನೋಡಿದೆ ನಮ್ಮ ಮನೆ ಕಾಣಿಸಿ ಖುಷಿಯಾಯಿತು ಅದೇ ಮುರುಕಲು ಮನೆ ಎದೆ ಭಾರವಾಯಿತು.

ಚಾಲಕ ನನ್ನನ್ನು ಇಳಿಸಿ ನನ್ನ ಸಾಮಾನು ಗಳನ್ನು ಮನೆಯೊಳಗೇ ತಂದು ಇಟ್ಟ. ನಾನು ನಿಧಾನವಾಗಿ ಮನೆಯೊಳಗೆ ಹೋದೆ ಅಡುಗೆ ಮನೆಯಲ್ಲಿ ಗಲಾಟೆ ಕೇಳಿಸಿ ಅಲ್ಲೇ ನಿಂತೆ ನನ್ನ ತಮ್ಮ ಹಾಗೂ ಅವನ ಹೆಂಡತಿ ಮಕ್ಕಳು ಊಟ ಮಾಡುತ್ತಿದ್ದರು. ಮತ್ತೆ ಗಂಜಿ ಬೇಕು ಎಂದು ಒಂದು ಸಣ್ಣ ಹುಡುಗ ಅಳುತ್ತಿದ್ದಾಗ ಖಾಲಿಯಾದ ಪಾತ್ರೆ ತೋರಿಸುತ್ತಾ ಮಗುವಿನ ಅಮ್ಮ ಇನ್ನು ಇಲ್ಲ ಎಂದು ಹೇಳುತ್ತಿದ್ದಳು.

ನನ್ನ ನೋಡಿದ ಹುಡುಗ ಅಳು ನಿಲ್ಲಿಸಿದ ಹುಡುಗನನ್ನೇ ನೋಡುತ್ತಿದ್ದ ತಮ್ಮ ಅವನು ಅಳು ನಿಲ್ಲಿಸಿದ್ದಕ್ಕೆ ಕಾರಣ ಹುಡುಕುತ್ತಾ ಹಿಂದೆ ತಿರುಗಿ ನನ್ನ ನೋಡಿ ಆಶ್ಚರ್ಯದಿಂದ ಬಳಿ ಬಂದ ನಾನು ಊರು ಬಿಟ್ಟಾಗ ಅವನು ಹುಟ್ಟಿರಲಿಲ್ಲ, ಗುರುತು ಹಿಡಿಯುವ ಹಿರಿ ಜೀವಿಗಳು ಮನೆಯಲ್ಲಿ ಇಲ್ಲ. ನಾನು ಸ್ವತಃ ಪರಿಚಯ ಮಾಡಿಕೊಂಡೆ, ನನ್ನ ತಮ್ಮ ಸ್ವಲ್ಪ ಹೊತ್ತು ಮಾತು ಆಡಲಿಲ್ಲ ಆಮೇಲೆ ನನ್ನ ನೋಡಿ ಸಂತೋಷದಿಂದ ತಬ್ಬಿ ಆನಂದದ ಕಣ್ಣೀರು ಸುರಿಸಿದ.

ಪಕ್ಕದಲ್ಲಿದ್ದ ಇನೊಬ್ಬ ತಮ್ಮ ವಿಷಯ ತಿಳಿದು ಓಡಿ ಬಂದ. ಅವನ ಹೆಂಡತಿ ಮಕ್ಕಳು ಬಂದು ಸಣ್ಣದಾದ ಆ ಮನೆ ಮತ್ತಷ್ಟು ಸಣ್ಣ ಕಾಣಿಸಿತು. ಮೊದಲಿಗೆ ನಾನು ತಂದ ವಸ್ತುಗಳನ್ನು ಎಲ್ಲ–ರಿಗೂ ಕೊಟ್ಟೆ, ಎರಡು ದಿನಗಳು ಕಳೆದಿದ್ದೇ ಗೊತ್ತಾಗಲಿಲ್ಲ. ಒಂದು ಬೆಳಿಗ್ಗೆ ಬೆಳಗಿನ ಉಪಹಾರ ಮಾಡುತ್ತಿರುವಾಗ ಒಂದು ಎತ್ತಿನ ಗಾಡಿ ಬಂದಿತು ಅದರಲ್ಲಿ ನನ್ನ ಸೋದರತ್ತೆ ಹಾಗೂ ಅವರ ಮಗಳು ಶಾಂತಿ ಬಂದರು ಶಾಂತಿಯನ್ನು ಇವತ್ತೇ ನೋಡಿದ್ದು.

ಆಮೇಲೆ ತಿಳಿದ ವಿಷಯ ಅವಳ ಗಂಡ ಮದುವೆಯಾಗಿ ಎರಡು ದಿನಕ್ಕೆ ಅಪಘಾತದಲ್ಲಿ ಮರಣ ಹೊಂದಿದ ಅಂತ ಅವಳನ್ನು ಅವರ ಅತ್ತೆಯ ಮನೆಯವರು ತವರಿಗೆ ಕಳಿಸಿದರು, ಇಷ್ಟು ವರ್ಷಗಳು ತವರಿನಲ್ಲಿ ಕಳೆದ ಶಾಂತಿ ಇಂದು ಅಮ್ಮನ ಜೊತೆ ಅಮ್ಮನ ತೌರು ಮನೆಗೆ ಬಂದಿದ್ದಳು. ಅದು ಸ್ವಾಮೀಜಿಯ ಜೊತೆ ಇದ್ದ ನನ್ನನ್ನು ನೋಡಲು.

ಒಂದು ವಾರ ಆಯಿತು ನಾನು ಊರಿಗೆ ಬಂದು ಸಂಭ್ರಮದ ದಿನಗಳು ಮುಗಿದಿದ್ದವು. ನನ್ನ ಮುಂದಿನ ಜೀವನ ಇದೇ ಊರಿನಲ್ಲಿ ಎಂದು ತೀರ್ಮಾನ ಮಾಡಿ ಎಲ್ಲರಿಗೂ ಹೇಳಿದೆ ನನ್ನ ತಮ್ಮಂದಿರಿಗೆ ಖುಷಿಯಾಯಿತು ಮನೆ ಸಣ್ಣದಾದರೂ ಜಾಗ ತುಂಬಾ ಇತ್ತು, ಹಾಗಾಗಿ ಸಣ್ಣದಾಗಿ ಮೂರು ಮನೆ ಬೇರೆ ಬೇರೆ ಕಟ್ಟುವ ಯೋಚನೆ ಮಾಡಿದೆ, ಸ್ವಾಮೀಜಿ ಕೊಟ್ಟ ಹಣದಲ್ಲಿ ಇದ್ದ ಹೊಲಕ್ಕೆ ಬೇಲಿ ಹಾಕಿಸಿದೆ ಊರಲ್ಲಿ ಕಿರಾಣಿ ಅಂಗಡಿ ಇರಲಿಲ್ಲ ಒಂದು ಅಂಗಡಿ ಶುರು ಮಾಡಿ ತಮ್ಮಂದಿರನ್ನು ಸೇರಿಸಿಕೊಂಡೆ ಪ್ರಾಮಾಣಿಕವಾಗಿ ಕೆಲಸ ಮಾಡುವ ಇದರಿಂದ ನಮಗೆ ಲಾಭ ಜಾಸ್ತಿ ಎಂದು ಅವರಿಗೆ ತಿಳಿ ಹೇಳಿದೆ. ಅವರನ್ನು ಅಂಗಡಿಯಲ್ಲಿ ಪಾಲುದಾರನಾಗಿ ಮಾಡಿಕೊಂಡೆ ವೇಳೆ ಸಿಕ್ಕಿದಾಗ ಬೇರೆಯವರ ಹೊಲದಲ್ಲಿ ಕೆಲಸ ಮಾಡಲು ನಾನು ಅವರ ಜೊತೆ ಕೈಗೂಡಿಸಿದೆ ಎಲ್ಲರೂ ನನ್ನನ್ನು ಸ್ವಾಮೀಜಿ ಎಂದೇ ಕರೆಯುತ್ತಿದ್ದರು.

ಆದರೆ ನನ್ನಲ್ಲಿ ಶಾಂತಿಯ ಬಗ್ಗೆ ಅನುರಾಗ ಮೂಡಿತ್ತು, ಅತ್ತೆ ಅವಳನ್ನು ಊರಿಗೆ ಕರೆದುಕೊಂಡು ಹೋಗಲಿಲ್ಲ. ಅವಳು ಇಲ್ಲಿ ಎಲ್ಲ–ರಿಗೂ ಸಹಾಯ ಮಾಡುತ್ತಾ ಖುಷಿಯಾಗಿ ಇದ್ದಳು ಅವಳದೇ ಒಂದು ವ್ಯಕ್ತಿತ್ವ ಅವಳನ್ನು ಎಲ್ಲರೂ ಗೌರವದಿಂದ ನೋಡುವಂತೆ ಮಾಡುತ್ತಿತ್ತು. ಅವಳಿಗೆ ಜೀವನದಲ್ಲಿ ಖುಷಿಕೊಡಬೇಕು ಎನ್ನುವುದು ನನ್ನ ತಲೆಯಲ್ಲಿ ಬಂದಿತ್ತು. ನನಗೂ ನನ್ನದೇ ಆದ ಮನೆ ಮಕ್ಕಳು ಎಂದು ಇರಬೇಕು ಅನಿಸಲು ಶುರುವಾಗಿತ್ತು. ಆದರೆ ಅವಳ ನಡತೆಯಲ್ಲಿ ನನ್ನ ಬಗ್ಗೆ ಗೌರವ ಇತ್ತೇ ಹೊರತು ಪ್ರೀತಿಯ ಸೆಳೆತ ಕಾಣಿಸಿರಲಿಲ್ಲ ಹೀಗೆ ಒಂದು ವರ್ಷವಾಯಿತು.

ಒಂದು ದಿನ ಮುಂಜಾನೆ ಬಟ್ಟೆ ಒಗೆಯಲು ನದಿಗೆ ಹೋದ ಶಾಂತಿ ಬಂದಿದ್ದು ಹೆಣವಾಗಿ ಕಾಲು ಜಾರಿ ಸುಳಿಯಲ್ಲಿ ಸಿಕ್ಕಿದ ಅವಳು ಸಿಕ್ಕಿದ್ದು ಎರಡು ದಿನದ ನಂತರ ನಾನು ಮನಸಾರೆ ಪ್ರೀತಿಸಿದ್ದ ಏಕೈಕ ವ್ಯಕ್ತಿ ಅವಳಾಗಿದ್ದಳು ಅವಳನ್ನು ಕಳೆದುಕೊಂಡ ನಾನು ತುಂಬಾ ದಿನ ಮನಸ್ಸಿನಲ್ಲೇ ಹಿಂಸೆ ಪಟ್ಟೆ ಒಳ್ಳೆ ವ್ಯಕ್ತಿತ್ವದ ಹೆಣ್ಣು ಸುಲಭವಾಗಿ ಸಿಗುವುದಿಲ್ಲ ಎಂದು ನನ್ನ ಅರಿವಿಗೆ ಬಂದಿತ್ತು.

ಎಲ್ಲಿ ಹೋದರೂ ಅವಳು ಕಾಣುತ್ತಿದ್ದಾಳೆ ಎಂದು ಭ್ರಮೆ ಶುರುವಾಯಿತು ಮತ್ತೆ ವಾಪಸ್ಸು ಆಶ್ರಮಕ್ಕೆ ಹೋಗಬೇಕನಿಸಿತು ದೊಡ್ಡ ಸ್ವಾಮೀಜಿ ಇನ್ನೂ ಇಳಿದು ಹೋಗಿದ್ದಾರೆ ಎಂದು ಆಶ್ರಮದಿಂದ ನನ್ನನ್ನು ನೋಡಲು ಬಂದವರು ಹೇಳಿದ್ದರು, ಚಿಕ್ಕ ಸ್ವಾಮೀಜಿಯವರು ನನ್ನ ಬರವನ್ನು ಕಾಯುತ್ತಿದ್ದಾರೆ ಎಂದು ಆಶ್ರಮದಲ್ಲಿ ಅಡುಗೆ ಮಾಡುವವರು ಹೇಳಿ ಕಳಿಸಿದ್ದರು.

ನಾನು ಸಂಸಾರದ ವ್ಯಾಮೋಹದಲ್ಲಿ ಮುಳುಗಬಾರದು ಎಂದು ನನ್ನ ಜೀವನದಲ್ಲಿ ಬಂದ ಶಾಂತಿಯನ್ನು ಕಾಲ ದೇವನು ಕರೆದುಕೊಂಡು ಹೋಗಿ ನನ್ನನ್ನು ಮತ್ತೆ ವೈರಾಗ್ಯ ಮಾರ್ಗದತ್ತ ಕರೆದುಕೊಂಡು ಹೋಗುತ್ತಿದ್ದಾನೆ ಎಂದು ಬಲವಾದ ಅನಿಸಿಕೆ ನನಗೆ ಬರಲು ನಾನು ಈ ಬಂಧನದಿಂದ ಬಿಡುಗಡೆಯಾಗಲು ತೀರ್ಮಾನಿಸಿ ಎಲ್ಲರನ್ನೂ ಬೀಳ್ಕೊಟ್ಟು ಆಶ್ರಮದ ಕಡೆಗೆ ಬರಿ ಕೈಯಲ್ಲಿ ನಡೆದೆ.

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR